PRGI NO : KNKAN/26/A0884

ಈ ನಮ್ಮ

# ದೃತಿ ನ್ಯೂಸ್

ಸದೃಡತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

E NAMMA DHURTHI NEWS KANNADA DAILY NEWS PAPER

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 229 ಪುಟಗಳು: 04 ಬೆಲೆ: 02 ದಿನಾಂಕ: 29-10-2026 ಗುರುವಾರ | email: enammadhruthinews@gmail.com | Pho : 7353595904




# ಬೆಂಗಳೂರು ಅಭಿವೃದ್ಧಿಗೆ ಅನುದಾನ ನೀಡುವಂತೆ ಸಿಎಂಗೆ ನಗರದ ಶಾಸಕರ ಮನವಿ

ದೃತಿ ನ್ಯೂಸ್ ಸುದ್ದಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಮಗ್ರ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡು ವಂತೆ ನಗರದ ಶಾಸಕರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಬೆಂಗಳೂರು ಅಭಿವೃದ್ಧಿ ಕುರಿತ ಸಭೆಯಲ್ಲಿ ನಗರದ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚೆ ನಡೆದಿದ್ದು, ಬಹುತೇಕ ಶಾಸಕರು ತಮ್ಮ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ಬೇಡಿಕೆ ಇಟ್ಟಿದ್ದಾರೆ.ಸಿ-ಎಂ ರೈಲು ನಗರದ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಹಾಗೂ ಸಾರ್ವಜನಿಕರು ಎದುರಿಸು ತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಲು ಆಯೋಜಿಸಿದ್ದ ಸಭೆಯಲ್ಲಿ ಬೆಂಗಳೂರಿನ ಶಾಸಕರು ಭಾಗವಹಿಸಿ ತಮ್ಮ ಕ್ಷೇತ್ರಗಳಲ್ಲಿನ ಸಮಸ್ಯೆಗಳು, ಕೈಗೊಳ್ಳಬೇಕಿರುವ ಕಾಮಗಾರಿಗಳು ಮತ್ತು ಅಗತ್ಯ ಅನುದಾನದ ಕುರಿತು ಸಲಹೆ-ಅಭಿಪ್ರಾಯಗಳನ್ನು ಮಂಡಿಸಿದರು.

**ಕ್ಷೇತ್ರವಾರು ಕಾಮಗಾರಿಗಳ ಮಾಹಿತಿ ಕೇಳಿದ ಸಿಎಂ:**

ಶಾಸಕರ ಬೇಡಿಕೆಗಳಿಗೆ ಸ್ಪಂದಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಪ್ರತಿಯೊಬ್ಬ ಶಾಸಕರು ತಮ್ಮ ಕ್ಷೇತ್ರದಲ್ಲಿ ಕೈಗೊಳ್ಳಬೇಕಿರುವ ಅಭಿವೃದ್ಧಿ ಕಾಮಗಾರಿಗಳ



ವಿವರ ಹಾಗೂ ಅವುಗಳಿಗೆ ಅಗತ್ಯವಿರುವ ಅನುದಾನದ ಪ್ರಮಾಣದ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದರು. ಶಾಸಕರು ನೀಡುವ ಪ್ರಸ್ತಾವನೆಗಳನ್ನು ಪರಿಶೀಲಿಸಿದ ಬಳಿಕ ಅನುದಾನ ಬಿಡುಗಡೆ ಕುರಿತು ತೀರ್ಮಾನ ಕೈಗೊಳ್ಳುವುದಾಗಿ ಭರವಸೆ ನೀಡಿದರು. ನಗರದ ರಸ್ತೆ, ಸಂಚಾರ ವ್ಯವಸ್ಥೆ ಸೇರಿದಂತೆ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡುವ ಅಗತ್ಯದ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು. ಕ್ಷೇತ್ರಗಳ ಅಗತ್ಯಗಳಿಗೆ ಅನುಗುಣವಾಗಿ ಕಾಮಗಾರಿಗಳ ಪಟ್ಟಿ ಸಿದ್ಧಪಡಿಸಿ ಸಲ್ಲಿಸಿದ ಬಳಿಕ ಅನುದಾನದ ಹಂಚಿಕೆ ಕುರಿತು ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ನೀಡಿದರು.

ಗುತ್ತಿಗೆದಾರರ ವಿರುದ್ಧ ಶಾಸಕರ ಅಸಮಾಧಾನ:ಬೆಂಗಳೂರು ನಗರದ ಕಸ ವಿಲೇವಾರಿ ಸಮಸ್ಯೆಯೂ ಸಭೆಯಲ್ಲಿ ಪ್ರಮುಖವಾಗಿ ಪ್ರಸ್ತಾಪವಾಯಿತು. ಕಸ ಸಂಗ್ರಹಣೆ ಮತ್ತು ವಿಲೇವಾರಿ ವ್ಯವಸ್ಥೆ ಸಮರ್ಪಕವಾಗಿ ನಡೆಯದಿರುವ ಕುರಿತು ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು. ಕಸದ ನಿರ್ವಹಣೆಯ ಗುತ್ತಿಗೆದಾರರ ಕಾರ್ಯವೈಖರಿ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ಟೆಂಡರ್ ಪ್ರಕ್ರಿಯೆಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದರು. ಕಸದ ನಿರ್ವಹಣೆ ವಿಚಾರದಲ್ಲಿ ಗುತ್ತಿಗೆದಾರರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ, ನಿಯಮಾನುಸಾರ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ಟೆಂಡರ್ ಷರತ್ತುಗಳ ಪಾಲನೆ ಹಾಗೂ ಗುತ್ತಿಗೆದಾರರ ಕಾರ್ಯಕ್ಷಮತೆ ಯನ್ನು ಪರಿಶೀಲಿಸಿ, ಲೋಪ ಗಳಿದ್ದರೆ ಕ್ರಮ ಕೈಗೊಳ್ಳಬೇಕು ಎಂದು ಶಾಸಕರು ಒತ್ತಾಯಿಸಿ ದರು. ನಗರದಲ್ಲಿ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂಬ ಅಭಿಪ್ರಾಯವೂ ಸಭೆಯಲ್ಲಿ ವ್ಯಕ್ತವಾಯಿತು.

**ಟನಲ್ ರಸ್ತೆ, ಎಲಿವೇಟೆಡ್ ಕಾರಿಡಾರ್‌ಗಳ ಪ್ರಸ್ತಾಪ:**

ಇದೇ ವೇಳೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಕೈಗೊಳ್ಳಲು ಉದ್ದೇಶಿಸಿರುವ ಸುರಂಗ ರಸ್ತೆ (ಟನಲ್ ರಸ್ತೆ) ಹಾಗೂ ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣ ಯೋಜನೆಗಳ ಕುರಿತು ಸಭೆಯಲ್ಲಿ ಮಾಹಿತಿ ಹಂಚಿಕೊಂಡರು.ಸಿಎಂ ರೈಲು ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಗೆ ಪರಿಹಾರ ಕಂಡುಕೊಳ್ಳಲು ಪರ್ಯಾಯ ರಸ್ತೆ ಸಂಪರ್ಕ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವ ಅಗತ್ಯದ ಕುರಿತು ಚರ್ಚಿಸಲಾಯಿತು. ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿ, ಕ್ಷೇತ್ರವಾರು ಅನುದಾನದ ಹಂಚಿಕೆ ಹಾಗೂ ಕಸ ವಿಲೇವಾರಿ ವ್ಯವಸ್ಥೆಯ ಸುಧಾರಣೆ ಸಭೆಯಲ್ಲಿ ಪ್ರಮುಖ ಚರ್ಚೆ ಅಯಿತ್ತು.

## ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದ ರೂಪುರೇಷೆ ಕುರಿತು ಚರ್ಚೆ



ದೃತಿ ನ್ಯೂಸ್ ಸುದ್ದಿ

ಗಂಗಾವತಿ: ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಸಿದ್ಧತೆ ಹಾಗೂ ರೂಪುರೇಷೆಗಳ ಕುರಿತು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಅವರು ಇಂದು ತಮ್ಮ ಗೃಹ ಕಚೇರಿಯಲ್ಲಿ ಹಿರಿಯ ನಿರ್ದೇಶಕ ಎಸ್. ನಾರಾಯಣ್, ನಟ ಅನಿರುದ್ಧ, ಇಲಾಖೆ ಕಾರ್ಯದರ್ಶಿ ಮಂಜುಶ್ರೀ ಹಾಗೂ ನಿರ್ದೇಶಕಿ ವಸುಂಧರಾ ಅವರೊಂದಿಗೆ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಕರ್ನಾಟಕ ರತ್ನ ಪ್ರಶಸ್ತಿ ರಾಜ್ಯದ ಅತ್ಯುನ್ನತ ಗೌರವಗಳಲ್ಲಿ ಒಂದಾಗಿದ್ದು, ಪ್ರಶಸ್ತಿ ಪ್ರದಾನ ಸಮಾರಂಭವನ್ನು ಅರ್ಥಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ಆಯೋಜಿಸಲು ಅಗತ್ಯ ಸಿದ್ಧತೆ ಕೈಗೊಳ್ಳಲಾಗುತ್ತಿದೆ. ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ವಿವಿಧ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ ಸಾಧಕರಿಗೆ ಗೌರವ ಸಲ್ಲಿಸುವ ಈ ಸಮಾರಂಭವನ್ನು ವಿಶೇಷವಾಗಿ ರೂಪಿಸುವ ನಿಟ್ಟಿನಲ್ಲಿ ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದರು. ಸಮಾರಂಭದ ಕಾರ್ಯಕ್ರಮದ ರೂಪುರೇಷೆ, ವೇದಿಕೆ ಸಿದ್ಧತೆ, ಗಣ್ಯರ ಉಪಸ್ಥಿತಿ ಸೇರಿದಂತೆ ವಿವಿಧ ವ್ಯವಸ್ಥೆಗಳ ಕುರಿತು ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು.

## ನ. 1ರಂದು ಕುಷ್ಟಗಿಯಲ್ಲಿ ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಣೆ



ದೃತಿ ನ್ಯೂಸ್ ಸುದ್ದಿ

ಕುಷ್ಟಗಿ: ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪೂರ್ವಭಾವಿ ಸಭೆ ಮಂಗಳವಾರ ಜರುಗಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ತಹಸೀಲ್ದಾರ್ ಅಶೋಕ ಶಿಗ್ಗಾವಿ ಮಾತನಾಡಿ, ಪ್ರತಿ ವರ್ಷದಂತೆ ಈ ಬಾರಿಯೂ ನವೆಂಬರ್ 1ರಂದು ತಾಲೂಕು ಆಡಳಿತದ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ತಿಳಿಸಿದರು. ಪಟ್ಟಣದ ಕಾರ್ಗಿಲ್ ವೀರಯೋಧ ದಿವಂಗತ ಮಲ್ಲಯ್ಯ ವೃತ್ತದಿಂದ ಕನ್ನಡಾಂಬೆಯ ಭಾವಚಿತ್ರದೊಂದಿಗೆ ಸಕಲ ಮಂಗಳವಾದ್ಯಗಳ ಸಹಿತ ಮೆರವಣಿಗೆ ನಡೆಯಲಿದೆ. ಮೆರವಣಿಗೆಯು ತಾಲೂಕು ಕ್ರೀಡಾಂಗಣ ತಲುಪಿದ ಬಳಿಕ ಕನ್ನಡ ರಾಜ್ಯೋತ್ಸವದ ಮುಖ್ಯ ಸಮಾರಂಭ ಜರುಗಲಿದೆ ಎಂದರು. ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸಿದ ಮಹನೀಯರು, ಕನ್ನಡಾಭಿಮಾನಿಗಳು, ಸಾಹಿತಿಗಳು, ಸಾಂಸ್ಕೃತಿಕ ಕಲಾವಿದರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರತಿಭಾವಂತರನ್ನು ಗುರುತಿಸಿ ಗೌರವಿಸಲಾಗುವುದು. ಸಭೆಯಲ್ಲಿ ಪಾಲ್ಗೊಂಡವರ ಸಲಹೆ-ಸೂಚನೆಗಳನ್ನು ಪರಿಗಣಿಸಿ ಎಲ್ಲರ ಸಹಕಾರದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಹೇಳಿದರು. ಕನ್ನಡ ರಾಜ್ಯೋತ್ಸವದಲ್ಲಿ ವಿವಿಧ ಇಲಾಖೆಗಳ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ಕಡ್ಡಾಯವಾಗಿ ಭಾಗವಹಿಸಬೇಕು. ಗೈರುಹಾಜರಾಗುವ ಸಿಬ್ಬಂದಿಗೆ ನೋಟಿಸ್ ನೀಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಸಭೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲೆಂಕಪ್ಪ ವಾಲಿಕಾರ, ಬಸವರಾಜ ಗಾಣಿಗೇರ, ಶರಣು ತೆಗ್ಗಿಹಾಳ ಹಾಗೂ ರವೀಂದ್ರ ಬಾಕಳೆ ಮಾತನಾಡಿ, ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಬಸಾಪುರ, ಪುರಸಭೆ ಮುಖ್ಯಾಧಿಕಾರಿ ವಿ.ಐ. ಬಿಳಗಿ, ದಿವಂಗತ ದೇವರಾಜ ಅರಸು ಇಲಾಖೆಯ ಅಧಿಕಾರಿ ಬಸವರಾಜ ನೆಲಗಣಿ, ತಾಲೂಕು ಪಂಚಾಯಿತಿ ವ್ಯವಸ್ಥಾಪಕ ಶಾಂತವೀರಯ್ಯ, ಹುಲ್ಲಪ್ಪ ಗಾಂಜಿ, ಸಾಹಿತಿ ಹನಮೇಶ ಗುಮಗೇರಿ, ನಬಿಸಾಬ ಕುಷ್ಟಗಿ, ಮುತ್ತಣ್ಣ ಬಾಚಲಾಪುರ, ಚನ್ನಪ್ಪ ನಾಲಗಾರ, ಸಂತೋಷ ತೋಟದ, ಬುಡ್ನೆಸಾಬ ಕಲಾದಗಿ, ಮಾರುತಿ ಹಲಗಿ, ಹುಸೇನಪ್ಪ ಮುದೇನೂರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಕನ್ನಡಪರ ಹೋರಾಟಗಾರರು ಹಾಗೂ ಗಣ್ಯರು ಉಪಸ್ಥಿತರಿದ್ದರು.

**362 ನೇ ದಿನದ ಬಲ್ಡೋಟಾ ವಿರೋಧಿ ಹೋರಾಟ**

## ಜನರಿಗೆ ಬೇಡವಾದ ಕಾರ್ಖಾನೆಗಳು ಬೇಡ : ಸಂಸದ ಹಿಟ್ನಾಳ

ದೃತಿ ನ್ಯೂಸ್ ಸುದ್ದಿ

ಕೊಪ್ಪಳ: ನಗರಸಭೆ ಆವರಣದಲ್ಲಿ ನಡೆಯುತ್ತಿರುವ 362ನೇ ದಿನದ ಬಲ್ಡೋಟ ತೊಲಗಿಸಿ, 22 ಕಾರ್ಖಾನೆ ಬಾಧಿತ ಹಳ್ಳಿಯ ಜನರ ಜೀವ ಉಳಿಸಿ, ಬಸಾಪುರ ಕೆರೆ ಸಾರ್ವಜನಿಕರಿಗೆ ಮುಕ್ತಗೊಳಿಸಿ, ತುಂಗಭದ್ರಾ ಜಲಾಶಯ ನದಿ ನೀರು ವಿಷಗೊಳಿಸಿದ ಕಾರ್ಖಾನೆಗಳನ್ನು ಸೀಜ್ ಮಾಡಬೇಕೆಂದು ನಡೆಸಿರುವ ಅನಿರ್ದಿಷ್ಟಾವಧಿ ಧರಣಿಯನ್ನು ಬೆಂಬಲಿಸಿ ಸಂಸದ ಕೆ. ರಾಜಶೇಖರ ಹಿಟ್ನಾಳ ಮಾತನಾಡಿದರು.

ಅವರು ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಅಕ್ಟೋಬರ್ 31 ರಿಂದ ಕರೆ ನೀಡಿರುವ ಕೊಪ್ಪಳ ಬಂದ್ ಯಶಸ್ವಿಯಾಗಲಿ, ಹೋರಾಟದ ಜೊತೆಗೆ ತಾವು ಸದಾ ಇದ್ದು, ಶೀಘ್ರ ಮುಖ್ಯಮಂತ್ರಿಗಳ ಭೇಟಿಗೆ ದಿನಾಂಕ ಗೊತ್ತು ಪಡಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇನೆ, ಈ ಕುರಿತು ಸಚಿವರು ಶಾಸಕರ ಜೊತೆಗೆ ಚರ್ಚಿಸುತ್ತೇನೆ ಎಂದು ಭರವಸೆ ನೀಡಿದರು. ಹೋರಾಟ ನಮ್ಮ ಜನರದ್ದಾಗಿರುವದರಿಂದ ಕಾಲಕಾಲಕ್ಕೆ ಸಾಧ್ಯವಾದ ಸಹಾಯ ಸಹಕಾರ ಮಾಡುತ್ತಿದ್ದೇನೆ ಈಗಲೂ ಮಾಡುತ್ತೇನೆ ಎಂದ ಅವರು, ಜನರಿಗೆ ಬೇಡವಾದರೆ ನಮಗೂ ಬೇಡ, ಜನರು ಅದಕ್ಕೆ ಗಟ್ಟಿಯಾಗಿ ನಿಲ್ಲಬೇಕು, ಸರಕಾರ ನಮ್ಮದೇ ಆದರೂ ಅದಕ್ಕೆ ಒಂದು ಮಾರ್ಗ ಇರುತ್ತದೆ, ಅವರು ತಮ್ಮ ಕೆಲಸ ಮಾಡುತ್ತಿರುತ್ತಾರೆ




ನಾವು ನಮ್ಮ ಹೋರಾಟದ ಮೂಲಕ ಬಲ್ಡೋಟಾ ತೊಲಗಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡೋಣ ಎಂದರು. ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಅವರು ಮಾತನಾಡಿ, ಕಾರ್ಖಾನೆ ಬಾಧಿತ 22 ಹಳ್ಳಿಗಳಲ್ಲಿ ಫ್ಯಾಕ್ಟರಿಗಳು ಮಾಲಿನ್ಯ ನಿಗ್ರಹ ಮಾಡಿ ತೋರಿಸಬೇಕು. ಇಲ್ಲವೆ ತಕ್ಷಣದಿಂದಲೇ ಕಾರ್ಖಾನೆ ಮುಚ್ಚಿ ಮಾಲಿನ್ಯ ಹೋಗಲಾಡಿಸಬೇಕು, ಗವಿಶ್ರೀಗಳು ಹೇಳಿದ ಮಾತನ್ನು ಉಲ್ಲೇಖಿಸಿದ ಅವರು ನಮಗೆ ಜಪಾನ್ ಮಾಡುವದು ಬೇಕಿಲ್ಲ ನಮ್ಮನ್ನು ಜೋಪಾನ ಮಾಡಿ ಸಾಕು, ಜರ್ಮನ್ ಟೆಕ್ನಾಲಜಿ ಎಂದು ಪದೇ ಪದೇ ಹೇಳುತ್ತೀರಿ ಮತ್ತೆ ಅದನ್ನು 20 ವರ್ಷ ಯಾಕೆ ಅಳವಡಿಸಿ ದೂಳು ಕಾಣದ ಹಾಗೆ ಮಾಡಿಲ್ಲ, ತುಂಗಭದ್ರ ನದಿ ವಿಷವಾಗಲು ಈ ಕಾರ್ಖಾನೆಗಳ ಪಾತ್ರ ಬಹಳ ದೊಡ್ಡದಿದೆ, ತುಂಗಭದ್ರಾ ನದಿ ಹರಿಯುವ ಜಿಲ್ಲೆಗಳ ರೈತರು ಈ ಹೋರಾಟಕ್ಕೆ ತೀವ್ರವಾಗಿ ಧುಮುಕಬೇಕು ಇಲ್ಲದೇ ಹೋದಲ್ಲಿ ಮುಂದೆ ನಿಮ್ಮ ಗದ್ದೆಗಳು ಬರಡು ಭೂಮಿಗಳಾಗುತ್ತವೆ ವಿಷ ತುಂಬಿದ ನೀರಿನಿಂದ ನಿಮ್ಮ ಬೆಳೆಯೂ ವಿಷವಾಗುತ್ತದೆ ಎಂದು ಆಗ್ರಹಿಸಿದರು.

ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ ಅವರು ಮಾತನಾಡಿ, ಬಾಧಿತ ಹಳ್ಳಿಗಳಲ್ಲಿ ಕಾರ್ಖಾನೆಗಳು ಗೂಂಡಾಗಿರಿ ಮಾಡುತ್ತಾ ಬೆದರಿಕೆ ಒಡ್ಡುವುದು ಸಹಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಪರಿಸರ ಹಾಳು ಮಾಡಿ ನಮ್ಮ ಜನಗಳ ಮೇಲೆ ಹಲ್ಲೆ ನಡೆಸಿದರೆ ತಕ್ಕ ಉತ್ತರವನ್ನು ಚಳವಳಿಯಿಂದ ಕೊಡೋಣ. ಧೈರ್ಯದಿಂದ ದಿಟ್ಟ ನಿಲುವು ತಳೆದು ಪರಿಸ್ಥಿತಿ ಎದುರಿಸೋಣ ಎಂದರು.

ಸಂಚಾಲಕ ಮಂಜುನಾಥ ಜಿ. ಗೊಂಡಬಾಳ, ನಟರಾಜ ಸವಡಿ, ಡಿ.ಎಂ. ಬಡಿಗೇರ, ರವಿ ಕಾಂತನವರ, ಸಂತೋಷ ದೇಶಪಾಂಡೆ, ಶಿವಕುಮಾರ ಕುಕನೂರ, ರಮೇಶ ತುಪ್ಪದ, ಶಂಭುಲಿಂಗಪ್ಪ ಹಾರಗೇರಿ, ರಾಜಶೇಖರ ಏಳುಬಾವಿ ಇದ್ದರು.

## ನವೆಂಬರ್ 04 ರಂದು ಸಾಹಿತ್ಯ ಭವನದಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವ ಸ್ಪರ್ಧೆ

ದೃತಿ ನ್ಯೂಸ್ ಸುದ್ದಿ

ಕೊಪ್ಪಳ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ ಹಾಗೂ ಮೈ ಭಾರತ್, ಕೊಪ್ಪಳ ರವರ ಸಂಯುಕ್ತಾಶ್ರಯದಲ್ಲಿ 2026-27ನೇ ಸಾಲಿನ ಕೊಪ್ಪಳ ಜಿಲ್ಲಾ ಮಟ್ಟದ ಯುವಜನೋತ್ಸವ ಹಾಗೂ 2026-27ನೇ ಸಾಲಿನ ವಿಕಸಿತ ಭಾರತ್ ಯುವ ಸಂಸತ್ತು ಕಾರ್ಯಕ್ರಮವನ್ನು ನವೆಂಬರ್ 04 ರ ಬುಧವಾರದಂದು ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಜನಪದ ನೃತ್ಯ( 7+3 ಸ್ಪರ್ಧಿಗಳ ತಂಡ), ಜನಪದ ಗೀತೆ(7+3 ಸ್ಪರ್ಧಿಗಳ ತಂಡ), ನುಕ್ಕಾಡ್ ನಾಟಕ(10 ಜನರ ತಂಡ)(ವಿಷಯ: ನಶ ಮುಕ್ತ ಯುವ), ವೈಯಕ್ತಿಕ ವಿಭಾಗದಲ್ಲಿ ಚಿತ್ರಕಲೆ, ಕವಿತೆ ಬರೆಯುವುದು(ಪ್ರಾದೇಶಿಕ ಭಾಷೆ/ಹಿಂದಿ/ಆಂಗ್ಲ), ಭಾಷಣ ಸ್ಪರ್ಧೆ: ವಿಕಸಿತ ಭಾರತ್ ಯುವ ಸಂಸತ್ತು(ವಿಷಯ ಒಂದು ದೇಶ ಒಂದು ಚುನಾವಣೆ) ಗಳು ಇರಲಿವೆ. ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ 15 ರಿಂದ 29 ವರ್ಷ ವಯೋಮಾನದೊಳಗಿನ ಯುವಜನರನ್ನು ಹಾಗೂ ವಿಕಸಿತ ಭಾರತ್ ಯುವ ಸಂಸತ್ತು ಕಾರ್ಯಕ್ರಮಕ್ಕೆ 18 ರಿಂದ 25 ವರ್ಷದ ಯುವಜನರನ್ನು ಮಾತ್ರ ಸಂಬಂಧಿಸಿದ ದಾಖಲೆಗಳನ್ನು ಆಧರಿಸಿ ಪರಿಗಣಿಸಲಾಗುವುದು. ಈ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದವರು ಮಾತ್ರ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ. ಮಹೆಚ್ಚಿನ ಮಾಹಿತಿಗಾಗಿ, ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಕೊಪ್ಪಳ ದೂರವಾಣಿ ಸಂ:08539-230121ಗೆ ಸಂಪರ್ಕಿಸಬಹುದು ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರಿನ ಕಿರಾಣಿ ವ್ಯಾಪಾರಿ ಕೊಲೆ ಖಂಡಿಸಿ ಮನವಿ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಿ, ಮೃತರ ಕುಟುಂಬಕ್ಕೆ 50 ಲಕ್ಷ ಪರಿಹಾರ ನೀಡಲು ಆಗ್ರಹ

ದೃತಿ ನ್ಯೂಸ್ ಸುದ್ದಿ

ಗಂಗಾವತಿ: ರಾಯಚೂರು ನಗರದ ಎಲ್‌ಬಿ-ಎಸ್ ನಗರದಲ್ಲಿ ಕಿರಾಣಿ ಅಂಗಡಿ ಮಾಲೀಕ ಬಾಪೂರು ನರಸಿಂಹ ಅವರನ್ನು ಕ್ಷುಲ್ಲಕ ಕಾರಣಕ್ಕೆ ಮಚ್ಚಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿರುವ ಘಟನೆಯನ್ನು ಖಂಡಿಸಿ, ಗಂಗಾವತಿ ತಾಲೂಕು ಆರ್ಯವೈಶ್ಯ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ, ಆರೋಪಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಲಾಯಿತು.

ಈ ಸಂಬಂಧ ಮಾಜಿ ನಗರಸಭೆ ಅಧ್ಯಕ್ಷ ಹಾಗೂ ಆರ್ಯವೈಶ್ಯ ಸಮಾಜದ ಮುಖಂಡ ಎಸ್. ರಾಘವೇಂದ್ರ ಶ್ರೇಷ್ಠಿ ಅವರ ನೇತೃತ್ವದಲ್ಲಿ ಸಮಾಜದ ಹಿರಿಯರು ಮತ್ತು ಮುಖಂಡರು ಗಂಗಾವತಿ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು. ನಂತರ ಮಾತನಾಡಿದ ಮಾಜಿ ನಗರಸಭೆ ಅಧ್ಯಕ್ಷ ಎಸ್. ರಾಘವೇಂದ್ರ ಶ್ರೇಷ್ಠಿ, ರಾಯಚೂರಿನ ಎಲ್‌ಬಿಎಸ್ ನಗರದ ಕಿರಾಣಿ ಅಂಗಡಿ ಮಾಲೀಕ ಬಾಪೂರು ನರಸಿಂಹ ಅವರ ಬಳಿ ಆರೋಪಿ ತಿಲಕ್ ಸಿಂಗ್ ಚಹಾ, ಗುಟ್ಕಾ ಹಾಗೂ ಸಿಗರೇಟ್‌ಗಳನ್ನು ಸಾಲವಾಗಿ ಕೇಳಿದ್ದಾನೆ. ಈಗಾಗಲೇ ಹಳೆಯ ಬಾಕಿ ಇದ್ದ ಕಾರಣ ನರಸಿಂಹ ಅವರು ಎರಡು ಸಿಗರೇಟ್‌ಗಳನ್ನು ನೀಡಲು ನಿರಾಕರಿಸಿದ್ದಾರೆ. ಇದರಿಂದ ರೊಚ್ಚಿಗೆದ್ದ ಆರೋಪಿ, ಅಂಗಡಿಯ ಮುಂದೆ ಕಸ ಗುಡಿಸುತ್ತಿದ್ದ ನರಸಿಂಹ ಅವರ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದಾನೆ. ಈ ಘಟನೆ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ ಎಂದು ತಿಳಿಸಿದರು.

ಕ್ಷುಲ್ಲಕ ಕಾರಣಕ್ಕೆ ಅಮಾಯಕ ವ್ಯಾಪಾರಿಯ ಪ್ರಾಣ ತೆಗೆದಿರುವುದು ಅತ್ಯಂತ ಖಂಡನೀಯ. ಇಂತಹ ಕೃತ್ಯ ಎಸಗುವವರಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ಸಮಾಜದಲ್ಲಿ ಕಾನೂನಿನ ಭಯ ಮೂಡಿಸಬೇಕು. ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಮೃತ ನರಸಿಂಹ ಅವರ ಕುಟುಂಬಕ್ಕೆ ಸರ್ಕಾರ ?50 ಲಕ್ಷ ಪರಿಹಾರ ನೀಡಬೇಕು. ಅಲ್ಲದೆ, ವ್ಯಾಪಾರಿಗಳ ಸುರಕ್ಷತೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ರಾಘವೇಂದ್ರ ಶ್ರೇಷ್ಠಿ ಆಗ್ರಹಿಸಿದರು. ವ್ಯಾಪಾರಿಗಳು ಪ್ರತಿನಿತ್ಯ ಸಾರ್ವಜನಿಕರೊಂದಿಗೆ ವ್ಯವಹರಿಸುವ ಸಂದರ್ಭದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಪೊಲೀಸ್



ಇಲಾಖೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಮೃತರ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಸರ್ಕಾರ ಹಾಗೂ ಜಿಲ್ಲಾಡಳಿತ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಆರ್ಯ ವೈಶ್ಯ ಸಮಾಜದ ಅಧ್ಯಕ್ಷ ದರೋಜಿ ನಾಗರಾಜ ಶ್ರೇಷ್ಠಿ,ಮಹಿಳಾ ಅಧ್ಯಕ್ಷ ಆರ್. ರೂಪರಾಣಿ,ಸಮಾಜದ ಉಪಾಧ್ಯಕ್ಷ ಜಿ.ಸುರೇಶ,ಕಾರ್ಯದರ್ಶಿ ಈಶ್ವರ ಶೆಟ್ಟಿ, ಸಮಾಜದ ಮುಖಂಡರಾದ ವೆಂಕಟೇಶ ದರೋಜ,ಡಿ.ರಾಜಕುಮಾರ, ಶ್ರೀಧರ ಹಿರೇ-ಜಂತಕಲ್, ಬಸವರಾಜ ಆರ್,ಅಶೋಕ ಗುಡಿಕೋಟಿ,ಪಾರ್ವತಿ, ಜಿ.ಸತ್ಯನಾರಾಯಣ, ಮಂಜುನಾಥ ಶೆಟ್ಟಿ, ಸೇರಿದಂತೆ ತಾಲೂಕು ಆರ್ಯವೈಶ್ಯ ಸಮಾಜದ ಹಿರಿಯರು, ಮುಖಂಡರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಈ ನಮ್ಮ ಧೃತಿ ನ್ಯೂಸ್

E NAMMA DHURTHI NEWS
KANNADA DAILY NEWS PAPER

## ಎನ್‌ಡಿಎ ಅಭ್ಯರ್ಥಿಗಳ ಗೆಲುವು 2028ರ ಚುನಾವಣೆಗೆ ದಿಕ್ಸೂಚಿ ; ಪ್ರಹ್ಲಾದ್ ಜೋಶಿ



ನವದೆಹಲಿ: ಕರ್ನಾಟಕ ವಿಧಾನ ಪರಿಷತ್ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಗಳು ಭರ್ಜರಿ ಜಯಭೇರಿ ಬಾರಿಸಿರುವುದು ಬರುವ 2028ರ ಚುನಾವಣೆಗೆ ಇದು ಶುಭ ಸೂಚನೆಯಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಪ್ರಹ್ಲಾದ್ ಜೋಶಿ ಹೇಳಿದ್ದಾರೆ.

ಅರ್ಧ ರಾಜ್ಯದಲ್ಲಿ ನಡೆದ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಪ್ರಜ್ಞಾವಂತ, ಶಿಕ್ಷಕ ಮತ್ತು ಪದವಿಧರ ಮತದಾರರು ಕಾಂಗ್ರೆಸ್ ಅನ್ನು ಸಂಪೂರ್ಣ ತಿರಸ್ಕರಿಸಿದ್ದಾರೆ. ಅಂದರೆ ರಾಜ್ಯದಲ್ಲಿ ಸಂಪೂರ್ಣ ಆಡಳಿತ ವಿರೋಧಿ ಅಲೆ ಇರುವುದು ಇದರಿಂದಲೇ ಸ್ಪಷ್ಟವಾಗಿದೆ ಎಂದಿದ್ದಾರೆ. ವಿಧಾನ ಪರಿಷತ್ ಚುನಾವಣೆಯಲ್ಲಿನ ಎನ್‌ಡಿಎ ಜಯಭೇರಿ ಶಿಕ್ಷಕ ಮತ್ತು ಪದವೀಧರ ಮತದಾರರು ಪಕ್ಷದ ಮೇಲಿಟ್ಟಿರುವ ವಿಶ್ವಾಸದ ಪ್ರತೀಕವಾಗಿದೆ ಎಂದಿರುವ ಸಚಿವರು, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಎನ್‌ಡಿಎ ಸದಾ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಾ, ಮತದಾರರ ಹಿತಾಸಕ್ತಿ ಮತ್ತು ಕ್ಷೇತ್ರದ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದೆ ಎಂದು ಹೇಳಿದರು. ಕಾಂಗ್ರೆಸ್ಸಿಗರು ವೋಟ್ ಚೋರಿ ಎಂದು ಎಷ್ಟೇ ಬೊಬ್ಬೆ ಹೊಡೆದರೂ ಪ್ರಜ್ಞಾವಂತ ಮತದಾರರೇ ಇದೀಗ ಅದಕ್ಕೆ ಪ್ರತ್ಯುತ್ತರ ಕೊಟ್ಟಿದ್ದಾರೆ. ಹಾಗಿದ್ದರೂ ಕಾಂಗ್ರೆಸ್ ನಾಯಕರು ಹಾಗೂ ಅಭ್ಯರ್ಥಿಗಳು ಮತ್ತೆ ವೋಟ್ ಚೋರಿಯ ನೆಪ ಹೇಳಿ ಸೋತ ಮುಖ ಒರೆಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ಟೀಕಿಸಿದರು. ಕರ್ನಾಟಕದಲ್ಲಿ ಗ್ಯಾರೆಂಟಿಗಳ ಭರವಸೆ ನೀಡಿ ಆಡಳಿತಕ್ಕೆ ಬಂದ ಕಾಂಗ್ರೆಸ್ ಕಳೆದ ಮೂರೂವರೆ ವರ್ಷದಲ್ಲಿ ಖಜಾನೆ ಖಾಲಿ ಮಾಡಿದ್ದು ಬಿಟ್ಟರೆ ಅಭಿವೃದ್ಧಿ ಮಾಡಿದ್ದೇನೂ ಇಲ್ಲ. ಕಾಂಗ್ರೆಸಿನ ದುರಾಳಿತದ ಬಗ್ಗೆ ಜನ ಭ್ರಮನಿರಸರಾಗಿದ್ದಾರೆ ಎನ್ನುವುದಕ್ಕೆ ವಿಧಾನ ಪರಿಷತ್ ಚುನಾವಣೆಯೇ ಸಾಕ್ಷಿ ಎಂದರು. ಈ ಕಾಂಗ್ರೆಸ್ ಸರ್ಕಾರ ಜನಸಾಮಾನ್ಯರ ಮೇಲೆ ಮಿತಿ ಮೀರಿದ ಬೆಲೆ ಏರಿಕೆ ಹೇರಿ ರಾಜ್ಯವನ್ನು ಬಲು ದುಬಾರಿಯತ್ತ ಕೊಂಡೊಯ್ದಿದೆ. ಭ್ರಷ್ಟಾಚಾರ, ತುಷ್ಟೀಕರಣ, ವಾಲ್ಮೀಕಿ ನಿಗಮ, ಕೆಪಿ-ಎಸ್‌ಸಿ ಹೀಗೆ ಸಾಲು ಸಾಲು ಹಗರಣಗಳಲ್ಲೇ ಹುದುಗಿ ಈಗ ಜನ-ರಿಂದಲೂ ತಿರಸ್ಕೃತಗೊಳ್ಳುತ್ತಿದೆ ಎಂದು ಹೇಳಿದರು. ಕಾಂಗ್ರೆಸ್ ಸರ್ಕಾರ ರಾಜ್ಯದ ಅಭಿವೃದ್ಧಿ ಮರೆತು ಕೇವಲ ಭ್ರಷ್ಟಾಚಾರ ಮತ್ತು ತುಷ್ಟೀಕರಣ ರಾಜಕಾರಣದಲ್ಲಿ ತೊಡಗಿದೆ. ಸ್ಟಿಂಗ್ ಆಪರೇಶನ್‌ನಂತಹ ನಾಚಿಕೆಗೇಡಿನ ಕೃತ್ಯಕ್ಕೆ ಕೈಹಾಕಿದೆ. ಪ್ರಜ್ಞಾವಂತ ಮತದಾರರಾಗಿರುವ ರಾಜ್ಯದ ಶಿಕ್ಷಕರು ಹಾಗೂ ಪದವೀಧರರು ಇದೆಲ್ಲದರ ವಿರುದ್ಧ ತೀವ್ರ ಆಕ್ರೋಶಗೊಂಡಿದ್ದಾರೆ. ಈ ಚುನಾವಣಾ ಫಲಿತಾಂಶವೇ ಇದಕ್ಕೆ ನಿದರ್ಶನ ಎಂದರು.

# ಪರಿಷತ್‌ನ ಚುನಾವಣೆ ; ಎನ್‌ಡಿಎ ಅಭ್ಯರ್ಥಿಗಳ ಗೆಲುವು, ಸೊನ್ನೆ ಸುತ್ತಿದ ಆಡಳಿತಾರೂಢ ಕಾಂಗ್ರೆಸ್

ಬೆಂಗಳೂರು: ಆಡಳಿತ ಮತ್ತು ಪ್ರತಿಪಕ್ಷಗಳ ಪ್ರತಿಷ್ಠೆಯ ಕಣವಾಗಿದ್ದ ವಿಧಾನಪ-ರಿಷತ್‌ನ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳ ಚುನಾವಣೆಯಲ್ಲಿ ಎಲ್ಲಾ ಎನ್‌ಡಿಎ ಅಭ್ಯರ್ಥಿಗಳು ಅಭೂತಪೂರ್ವ ಗೆಲುವು ಸಾಧಿಸಿದ್ದಾರೆ. ಆಡಳಿತಾರೂಢ ಕಾಂಗ್ರೆಸ್‌ನ ಎಲ್ಲಾ ಅಭ್ಯರ್ಥಿಗಳು ಪರಾಭವಗೊಳ್ಳುವ ಮೂಲಕ ಮುಖಭಂಗ ಅನುಭವಿಸಿದ್ದಾರೆ.ಪ್ರತಿಪಕ್ಷ ಬಿಜೆಪಿಯ ಎಲ್ಲಾ 3 ಅಭ್ಯರ್ಥಿಗಳು ಚುನಾಯಿತರಾಗಿದ್ದಾರೆ. ಕಾಂಗ್ರೆಸ್‌ನ 4 ಅಭ್ಯರ್ಥಿಗಳು ಸೋತಿ-ದ್ದಾರೆ.ನಕ್ಷೆಗಳನ್ನು ನೋಡಿ

ಬಿಜೆಪಿ 3 ಸ್ಥಾನಗಳನ್ನು ಉಳಿಸಿಕೊಂಡಿದ್ದರೆ ಕಾಂಗ್ರೆಸ್ ಇದ್ದ 1 ಸ್ಥಾನವನ್ನು ಕಳದುಕೊಂಡಿದೆ. ಆದರೆ ಜೆಡಿ-ಎಸ್-ಬಿಜೆಪಿ ಮೈತ್ರಿಯಿಂದಾಗಿ ಸ್ಪರ್ಧಿಸಿದ್ದ ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಗೆಲುವು ಸಾಧಿಸಿದೆ. ವಿಧಾನಪರಿಷತ್‌ನ 2 ಶಿಕ್ಷಕರ ಮತ್ತು 2 ಪದವೀಧರ ಕ್ಷೇತ್ರಗಳ ದ್ವೈವಾರ್ಷಿಕ ಚುನಾವಣೆಯ ಮತ ಎಣಿಕೆ ಪೂರ್ಣಗೊಂಡಿದ್ದು, ಅಧಿಕೃತ ಫಲಿತಾಂಶ ಪ್ರಕಟವಾಗಿದೆ.ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಎ.ಪಿ.ರಂಗನಾಥ ಅವರ ಸಮೀಪದ ಪ್ರತಿಸ್ಪರ್ಧಿ ಮಾಜಿ ಉಪಸಭಾಪತಿ ಪುಟ್ಟಣ್ಣ ಅವರನ್ನು 908 ಮತಗಳ ಅಂತರದಿಂದ ಮಣಿಸಿದ್ದಾರೆ.

ರಂಗನಾಥ ಅವರಿಗೆ 10,810 ಮತಗಳು ದೊರೆತರೆ ಪುಟ್ಟಣ್ಣ ಅವ-



ರಿಗೆ 9,902 ಮತಗಳು ದೊರೆತಿವೆ. ಉಳಿದ ನಾಲ್ವರು ಪಕ್ಷೇತರ ಅಭ್ಯರ್ಥಿಗಳಿಗೆ ಅತ್ಯಲ್ಪ ಮತಗಳು ಬಿದ್ದಿವೆ. ಚಲಾವಣೆಯಾಗಿದ್ದ 22,913 ಮತಗಳಲ್ಲಿ 21,056 ಮತಗಳು ಸಿಂಧುವಾಗಿದ್ದು, 1,857 ಮತಗಳು ತಿರಸ್ಕೃತಗೊಂಡಿವೆ. ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಶಶಿಲ್ ಜಿ. ನಮೋಶಿ ಅವರು 3,397 ಮತಗಳ ಅಂತರದಿಂದ ಜಯ ಗಳಿಸಿದ್ದಾರೆ. ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಅಭ್ಯರ್ಥಿ ಶರಣಪ್ಪ ಮಟ್ಟೂರ ಪರಾಭವಗೊಂಡಿದ್ದಾರೆ. ಶಶಿಲ್ ನಮೋಶಿ 15,596 ಮತಗಳನ್ನು ಪಡೆದಿದ್ದರೆ, ಶರಣಪ್ಪ ಮಟ್ಟೂರ ಅವರು 12,299 ಮತಗಳನ್ನು ಪಡೆದಿದ್ದಾರೆ.ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಕೆ.ಎಂ.ಸುರೇಶ ಅವರು 23,098 ಮತಗಳ ಅಂತರದಿಂದ ಗೆಲುವಿನ ನಗೆ ಬೀರಿದ್ದಾರೆ.

ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆಮಠ್ ಅವರು ಪರಾಭವಗೊಂಡಿದ್ದು, 42,922 ಮತಗಳನ್ನು ಪಡೆದಿದ್ದಾರೆ. ಸುರೇಶ ಅವರು 66,020 ಮತಗಳನ್ನು ಪಡೆದಿದ್ದಾರೆ.ಉಳಿದ 8 ಅಭ್ಯರ್ಥಿಗಳು 4 ಅಂಕಿಗಳಿಗಿಂತ ಕಡಿಮೆ ಮತಗಳನ್ನು ಪಡೆದಿದ್ದಾರೆ. ಈ ಕ್ಷೇತ್ರದಲ್ಲಿ ಚಲಾವಣೆಯಾಗಿದ್ದ 1,32,138 ಮತಗಳಲ್ಲಿ 1,12,026 ಮತಗಳು ಸಿಂಧುವಾಗಿದ್ದು, 20,076 ಮತಗಳು ತಿರಸ್ಕೃತಗೊಂಡಿವೆ. ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ವಿ.ಸಂಕನೂರ ಅವರು 9,323 ಮತಗಳ ಅಂತರದಿಂದ ಜಯ ಗಳಿಸಿದ್ದಾರೆ. ಇವರು 33,711 ಮತಗಳನ್ನು ಪಡೆದಿದ್ದರೆ, ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಮೋಹನ್ ಲಿಂಬಿಕಾಯಿ 24,388 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ.

ಚಲಾವಣೆಯಾಗಿದ್ದ 73,691 ಮತಗಳಲ್ಲಿ 63,446 ಮತಗಳು ಸಿಂಧುವಾಗಿದ್ದು, 10,245 ಮತಗಳು ತಿರಸ್ಕೃತಗೊಂಡಿವೆ.ವಿಧಾನಪರಿಷತ್ ಸದಸ್ಯರಾದ ಪುಟ್ಟಣ್ಣ, ಶಶಿಲ್ ಜಿ. ನಮೋಶಿ, ಎಸ್.ವಿ.ಸಂಕನೂರ, ಚಿದಾನಂದ ಎಂ. ಗೌಡ ಅವರು ನ.11 ರಂದು ನಿವೃತ್ತಿಯಾಗಲಿದ್ದಾರೆ. ಇವರ ನಿವೃತ್ತಿಯಿಂದ ತೆರವಾಗುವ ವಿಧಾನಪ-ರಿಷತ್ ಸದಸ್ಯ ಸ್ಥಾನಗಳಿಗೆ ಚುನಾವಣಾ ಆಯೋಗ ಅ.23 ರಂದು ಮತದಾನ ನಡೆಸಿತ್ತು. ನಿನ್ನೆ ಬೆಳಗ್ಗೆಯಿಂದ ಆರಂಭವಾಗಿದ್ದ ಮತ ಎಣಿಕೆ ಪ್ರಕ್ರಿಯೆಯು ಇಂದು ಬೆಳಗ್ಗೆ ಮುಕ್ತಾಯಗೊಂಡಿದ್ದು, ಆಯಾ ಕ್ಷೇತ್ರಗಳ ಚುನಾವಣಾಧಿಕಾರಿಗಳು ಫಲಿತಾಂಶವನ್ನು ಅಧಿಕೃತವಾಗಿ ಪ್ರಕಟಿಸಿದ್ದಾರೆ. ವಿಧಾನಪ-ರಿಷತ್‌ನ ಈ ಚುನಾವಣೆ ವಿದ್ಯಾವಂತರ ಮತ್ತು ಸುಶಿಕ್ಷಿತ ಮತದಾರರು ನೀಡಿರುವ ಜನಾದೇಶವಾಗಿದೆ.ಎನ್‌ಡಿಎ ಮೈತ್ರಿಕೂಟದ ಬಿಜೆಪಿ-ಜೆಡಿಎಸ್ ನಾಯಕರು, ಮುಖಂಡರು, ಕಾರ್ಯಕರ್ತರಲ್ಲಿ ಹೊಸ ಉತ್ಸಾವವನ್ನು ಈ ಚುನಾವಣಾ ಫಲಿತಾಂಶ ಮೂಡಿಸಿದೆ. ಆದರೆ ಆಡಳಿತಾರೂಢ ಕಾಂಗ್ರೆಸ್‌ನಲ್ಲಿನ ಉತ್ಸಾಹಕ್ಕೆ ತಣ್ಣೀರೆರಚಿದಂತಾಗಿದೆ.

## ಮಾರುಕಟ್ಟೆ ಮೇಲೆ ಸುಡಾನ್ ಸೇನೆಯಿಂದ ಡ್ರೋನ್ ದಾಳಿ : 100ಕ್ಕೂ ಹೆಚ್ಚು ಮಂದಿ ಸಾವು



ಶೆಂಡಿ: ಸುಡಾನ್‌ನ ನೈಋತ್ಯ ಭಾಗದಲ್ಲಿರುವ ದಕ್ಷಿಣ ದಾರ್ಫರ್ ಪ್ರಾಂತ್ಯದ ರಾಜಧಾನಿ ನಿಯಾಲಾದ ಜನನಿಬಿಡ ಮಾರುಕಟ್ಟೆ ಮೇಲೆ ಸುಡಾನ್ ಸೇನೆ ನಡೆಸಿದ ಡ್ರೋನ್ ದಾಳಿಯಲ್ಲಿ 100ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, 113 ಜನರು ಗಾಯಗೊಂಡಿದ್ದಾರೆ.

ಮೃತಪಟ್ಟವರು ಮತ್ತು ಗಾಯಗೊಂಡವರಲ್ಲಿ ಹೆಚ್ಚಿನವರು ಮಹಿಳೆಯರು ಹಾಗೂ ಮಕ್ಕಳು ಎಂದು ಸಂಘಟನೆ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ. ದಾಳಿಯನ್ನು ಖಂಡಿಸಿರುವ ಮಾನವ ಹಕ್ಕು ಸಂಘಟನೆಯು, ಘಟನೆಯ ಬಗ್ಗೆ ಸ್ವತಂತ್ರ ತನಿಖೆ ನಡೆಸುವಂತೆ ಆಗ್ರಹಿಸಿದೆ. ಈ ಹತ್ಯಾಕಾಂಡದಿಂದ ಜನಸಾಮಾನ್ಯರು ವ್ಯಾಪಾರ ಮಾಡುತ್ತಿದ್ದ ಮಾರುಕಟ್ಟೆಯು ಸಾಮೂಹಿಕ ಸಾವು ಮತ್ತು ಗಾಯಗಳ ತಾಣವಾಗಿ ಮಾರ್ಪಟ್ಟಿದೆ. ಇದು ಸ್ಥಳೀಯ ನಿವಾಸಿಗಳ ಜೀವಕ್ಕೆ ಅಪಾಯ ತಂದಿದ್ದು, ಈಗಾಗಲೇ ನಡೆಯುತ್ತಿರುವ ಯುದ್ಧದಿಂದ ಅವರು ಅನುಭವಿಸುತ್ತಿರುವ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಸಂಘಟನೆ ಹೇಳಿದೆ. ಡಾಕ್ಟರ್ಸ್ ವಿದೌಟ್ ಬಾರ್ಡರ್ಸ್ ಸಂಸ್ಥೆಯೂ ನಿಯಾಲಾದ ತನ್ನ ಆಸ್ಪತ್ರೆಗೆ 36 ಮೃತದೇಹಗಳು ಬಂದಿವೆ ಹಾಗೂ ತುರ್ತು ಚಿಕಿತ್ಸಾವಿಭಾಗದಲ್ಲಿ 150 ಗಾಯಾಳುಗಳನ್ನು ಕಂಡಿರುವುದಾಗಿ ಈ ಹಿಂದೆ ತಿಳಿಸಿತ್ತು. ದಕ್ಷಿಣ ದಾರ್ಫರ್ ಪ್ರಾಂತ್ಯದ ರಾಜಧಾನಿ ನಿಯಾಲಾ ಪ್ರಸ್ತುತ ಅರೆಸೇನಾ ಪಡೆ ರ್ಯಾಪಿಡ್ ಸಪೋರ್ಟ್ ಫೋರ್ಸಸ್ ನಿಯಂತ್ರಣದಲ್ಲಿದೆ. 2023ರಿಂದ ಈ ಪಡೆ ಸುಡಾನ್ ಸೇನೆಯೊಂದಿಗೆ ಸಂಘರ್ಷ ನಡೆಸುತ್ತಿದೆ. ಇತ್ತೀಚಿನ ವಾರಗಳಲ್ಲಿ ಎರಡೂ ಕಡೆಯಿಂದ ಡ್ರೋನ್ ದಾಳಿಗಳು ತೀವ್ರಗೊಂಡಿದ್ದು, ನೂರಾರು ಮಂದಿ ಮೃತಪಟ್ಟಿದ್ದಾರೆ. ಸ್ಫೋಟಕಗಳನ್ನು ಹೊತ್ತ ಡ್ರೋನ್‌ಗಳ ಮೂಲಕ ಆಸ್ಪತ್ರೆಗಳು, ಅಣೆಕಟ್ಟುಗಳು, ಶಾಲೆಗಳು, ಮಾರುಕಟ್ಟೆಗಳು ಮತ್ತು ನಿರಾಶ್ರಿತರ ಶಿಬಿರಗಳಂತಹ ನಾಗರಿಕ ಮೂಲಸೌಕರ್ಯಗಳ ಮೇಲೆಯೂ ದಾಳಿ ನಡೆಸಲಾಗಿದೆ. ಈ ಸಂಘರ್ಷದಲ್ಲಿ ನಾಗರಿಕರಿಗೆ ಡ್ರೋನ್ ದಾಳಿಗಳೇ ಅತ್ಯಂತ ಮಾರಕ ಅಪಾಯವಾಗಿವೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

# ಹಾಸನಾಂಬೆ ದರ್ಶನಕ್ಕೆ ಕಳೆದ ಬಾರಿಗಿಂತ 10 ಲಕ್ಷಕ್ಕೂ ಹೆಚ್ಚು ಭಕ್ತರ ಆಗಮನ ನಿರೀಕ್ಷೆ : ಸಚಿವ ಶಿವಲಿಂಗೇಗೌಡ

ಹಾಸನ: ಹಾಸನಾಂಬೆ ಉತ್ಸವವು ಜಿಲ್ಲೆಗೆ ಸೀಮಿತವಾಗದೇ ನಾಡಹಬ್ಬವಾಗಿ ರೂಪುಗೊಂಡಿದ್ದು, ಈ ಬಾರಿ ಕಳೆದ ವರ್ಷಕ್ಕಿಂತ ಸುಮಾರು 10 ಲಕ್ಷಕ್ಕೂ ಹೆಚ್ಚು ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ ಭಕ್ತರಿಗೆ ಅಗತ್ಯವಾದ ಮೂಲಸೌಕರ್ಯ ಹಾಗೂ ಹೆಚ್ಚುವರಿ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತಿದೆ ಎಂದು ಅಬಕಾರಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ತಿಳಿಸಿದರು.

ಹಾಸನಾಂಬೆ ಉತ್ಸವದ ಪೂರ್ವಸಿದ್ಧತೆಗಳ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉತ್ಸವವನ್ನು ಕಳೆದ ಬಾರಿಗಿಂತಲೂ ಹೆಚ್ಚಿನ ಸುವ್ಯವಸ್ಥೆಯೊಂದಿಗೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ನಾಡಿನ ಹಿತದಷ್ಟಿಯಿಂದ ಉತ್ಸವವನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗುತ್ತಿದ್ದು, ಭಾರಿ ಸಂಖ್ಯೆಯಲ್ಲಿ ಆಗಮಿಸುವ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಇಂದು ಸಂಜೆಯೊಳಗೆ ಎಲ್ಲ ಪೂರ್ವಸಿದ್ಧತಾ ಕಾರ್ಯಗಳನ್ನು ಪೂರ್ಣಗೊಳಿಸಲಾಗುವುದು ಎಂದರು. ಗ್ರಾಮೀಣ ವೈಭವಕ್ಕೆ ಆದ್ಯತೆ: ಹಾಸನಾಂಬೆ ದರ್ಶನಕ್ಕೆ ಆಗಮಿಸುವ ಭಕ್ತರಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಗ್ರಾಮೀಣ ಕ್ರೀಡೆ ಹಾಗೂ ಸಂಸ್ಕೃತಿಗೆ ಹೆಚ್ಚಿನ ಆದ-್ಯತೆ ನೀಡಲಾಗಿದ್ದು, ದಸರಾ ಮಾದರಿಯಲ್ಲಿ ಕ್ರೀಡಾಕೂಟಗಳನ್ನು ನಡೆಸಲಾಗುತ್ತಿದೆ. ಕುಸ್ತಿ, ಕಬಡ್ಡಿ ಮತ್ತು ವಾಲಿಬಾಲ್ ಪಂದ್ಯಗಳು ಪ್ರಮುಖ ಆಕರ್ಷಣೆಯಾಗಲಿವೆ. ಹಳ್ಳಿಕಾರ್ ಸೇರಿದಂತೆ ವಿವಿಧ ತಳಿಗಳ ಜಾನುವಾರು ಪ್ರದರ್ಶನ, ಟಗರು ಪ್ರದರ್ಶನ ಹಾಗೂ ಶ್ವಾನ ಪ್ರದರ್ಶನಗಳೂ ನಡೆಯಲಿವೆ ಎಂದು ತಿಳಿಸಿದರು.

ಕುಸ್ತಿ ಪಂದ್ಯಗಳಲ್ಲಿ ರಾಜ್ಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕುಸ್ತಿಪಟುಗಳು ಭಾಗವಹಿಸಲಿದ್ದಾರೆ. ದಸರಾ ಕುಸ್ತಿ ಪಂದ್ಯಗಳಲ್ಲಿ ಪಾಲ್ಗೊಂಡಿದ್ದ ಕುಸ್ತಿಪಟುಗಳೂ ಸೇರಿದಂತೆ ಸುಮಾರು 400 ಕುಸ್ತಿಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಲಿರುವುದು ಉತ್ಸವದ ವಿಶೇಷತೆಯಾಗಿದೆ ಎಂದರು.ಈ ಸಂದರ್ಭದಲ್ಲಿ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

**ಹಾಸನಾಂಬ ಜಾತ್ರೆಗೆ 2 ಸಾವಿರ ಪೊಲೀಸರ ಭದ್ರತೆ**

ಹಾಸನಾಂಬ ದೇವಿಯ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಭದ್ರತೆ ಹಾಗೂ ಜನದಟ್ಟಣೆ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದು ದಕ್ಷಿಣ ವಲಯದ ಪೊಲೀಸ್ ಮಹಾನಿರೀಕ್ಷಕ ಬೋರಲಿಂಗಯ್ಯ ತಿಳಿಸಿದರು. ಹಾಸನಾಂಬ ದೇವಾಲಯಕ್ಕೆ ಭೇಟಿ ನೀಡಿದ ಅವರು, ನಾಳೆಯಿಂದ ನ. 11ರವರೆಗೆ ನಡೆಯಲಿರುವ ಧರ್ಮದರ್ಶನದ ಸರದಿಯ ಬ್ಯಾರಿಕೇಡ್ ವ್ಯವಸ್ಥೆ, ವಿಶೇಷ ದರ್ಶನದ ವ್ಯವಸ್ಥೆಗಳು, ವಾಹನಗಳ ಸಂಚಾರ ನಿಯಂತ್ರಣ, ಪಾರ್ಕಿಂಗ್ ಸ್ಥಳಗಳು ಹಾಗೂ ವಿವಿಧ ಕಾರ್ಯಕ್ರಮಗಳು ನಡೆಯುವ ಪ್ರದೇಶ, ಜಾತ್ರೆಯ ಬಂದೋಬಸ್ತ್ ವ್ಯವಸ್ಥೆಗಳನ್ನು ಪರಿಶೀಲಿಸಿ ನಂತರ ಮಾತನಾಡಿದರು. ಮೂರು ಪಾಳಿಗಳಲ್ಲಿ ಸುಮಾರು 2 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುವುದು,



ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಭಕ್ತರು ಯಾವುದೇ ತೊಂದರೆಯಿಲ್ಲದೆ ದೇವಿಯ ದರ್ಶನ ಪಡೆಯಲು ಹಾಗೂ ಜಾತ್ರೆಯ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಹಾಸನ ಸೇರಿದಂತೆ ದಕ್ಷಿಣ ವಲಯದ ನಾಲ್ಕು ಜಿಲ್ಲೆಗಳಿಂದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಹೊರ ಜಿಲ್ಲೆಗಳಿಂದ ಗಹರಕ್ಷಕ ದಳದ ಸಿಬ್ಬಂದಿ ಹಾಗೂ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ತುಕಡಿಗಳನ್ನೂ ಕರೆಸಿಕೊಳ್ಳಲಾಗುವುದು. ಇಬ್ಬರು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳು ಕರ್ತವ್ಯ ನಿರ್ವಹಿಸಲಿದ್ದು, ಭಕ್ತರ ಸಂಖ್ಯೆ ಹೆಚ್ಚಾದ ಸಂದರ್ಭದಲ್ಲಿ ಮೂವರು ಪೊಲೀಸ್ ವ-ರಿಷ್ಠಾಧಿಕಾರಿಗಳು ಭದ್ರತಾ ಜವಾಬ್ದಾರಿ ವಹಿಸಲಿದ್ದಾರೆ ಎಂದು ಹೇಳಿದರು.ಸುಗಮ ದರ್ಶನಕ್ಕೆ ಕ್ರಮ:ಧರ್ಮದರ್ಶನದ ಸರದಿಯ ಬ್ಯಾರಿಕೇಡ್ ವ್ಯವಸ್ಥೆಯೊಂದಿಗೆ 300 ರೂ. ಮತ್ತು 1 ಸಾವಿರ ರೂ. ವಿಶೇಷ ದರ್ಶನ, ಗೋಲ್ಡ್ ಪಾಸ್ ಹಾಗೂ ಶಿಷ್ಟಾಚಾರದಡಿ ದರ್ಶನ ಪಡೆಯುವ ವ್ಯವಸ್ಥೆಗಳನ್ನೂ ಪರಿಶೀಲಿಸಲಾಗಿದೆ. ವಾಹನಗಳ ಸುಗಮ ಸಂಚಾರಕ್ಕೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಭಕ್ತರು ಪಾರ್ಕಿಂಗ್ ಸ್ಥಳಗಳನ್ನು ಸುಲಭವಾಗಿ ಗುರುತಿಸಲು ಕ್ಯೂಆರ್ ಕೋಡ್ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.ವಯೋವದ್ಧರು ಹಾಗೂ ವಿಶೇಷ ಚೇತನರಿಗೆ ಪ್ರತ್ಯೇಕ ಸರದಿಯ ವ್ಯವಸ್ಥೆ ಮಾಡಲಾಗಿದ್ದು, ಭಕ್ತರ ಸುರಕ್ಷತೆ ಮತ್ತು ಸುಗಮ ದರ್ಶನಕ್ಕೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಎಎಸ್ಪಿ ಶ್ರೀನಿಧಿ, ಡಿವೈಎಸ್ಪಿ ಗಂಗಾಧರಪ್ಪ ಸೇರಿದಂತೆ ಪೊಲೀಸ್ ಅಧಿಕಾರಿಗಳು ಜೊತೆಯಲ್ಲಿದ್ದರು.

## ನೈಸ್ ರಸ್ತೆಯಲ್ಲಿ ಲಾರಿಗಳ ನಡುವೆ ಅಪಘಾತ : ಇಬ್ಬರು ಚಾಲಕರ ಸಾವು




ಬೆಂಗಳೂರು: ಮುಂದೆ ಹೋಗುತ್ತಿದ್ದ ಲಾರಿಗೆ ಹಿಂದಿನಿಂದ ವೇಗವಾಗಿ ಬಂದ ಮತ್ತೊಂದು ಲಾರಿ ಗುದ್ದಿದ ಪರಿಣಾಮ ಇಬ್ಬರು ಚಾಲಕರು ಮೃತಪಟ್ಟಿರುವ ಘಟನೆ ನೈಸ್ ರಸ್ತೆಯಲ್ಲಿ ಮಧ್ಯರಾತ್ರಿ ಸಂಭವಿಸಿದೆ. ತಮಿಳುನಾಡಿನ ನಿವಾಸಿಗಳಾದ ಚಾಲಕ ರಾಜು (60) ಮತ್ತು ಸಹ ಚಾಲಕ ಪರಂದಾಮ (60) ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಎರಡು ಶವಗಳನ್ನು ಆರ್ ಆರ್ ಆಸ್ಪತ್ರೆಯ ಶವಗಾರದಲ್ಲಿ ಮರಣೋತ್ತರ ಪರೀಕ್ಷೆಗೆ ಇಡಲಾಗಿದೆ. ತಮಿಳುನಾಡಿನಿಂದ ಅಡಿಗೆ ಉಪ್ಪನ್ನು ತುಂಬಿಕೊಂಡು ಕೊಪ್ಪಳಕ್ಕೆ ಲಾರಿಯೊಂದು ಹೋಗುತ್ತಿತ್ತು. ರಾತ್ರಿ 12.30 ರ ಸುಮಾರಿನಲ್ಲಿ ನೈಸ್ ರಸ್ತೆಯ ಕೋನಸಂದ್ರದ ಸೇತುವೆ ಬಳಿ ಕಬ್ಬಿಣ ತುಂಬಿಕೊಂಡು ಮುಂದೆ ಹೋಗುತ್ತಿದ್ದ ಲಾರಿಗೆ ಹಿಂದಿನಿಂದ ಈ ಲಾರಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಚಾಲಕರು ಮೃತಪಟ್ಟಿದ್ದಾರೆ. ಗುದ್ದಿದ ರಭಸಕ್ಕೆ ಒಂದು ಲಾರಿಯ ಮುಂಭಾಗ ಹಾಗೂ ಇನ್ನೊಂದು ಲಾರಿಯ ಹಿಂಭಾಗ ನಜ್ಜುಗುಜ್ಜಾಗಿದೆ. ಸುದ್ದಿ ತಿಳಿದು ಸ್ಥಳಕ್ಕೆ ದಾವಿಸಿದ ಕೆಂಗೇರಿ ಸಂಚಾರಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಒಬ್ಬನೇ ವ್ಯಕ್ತಿಗೆ ಎಡರು ಕಡೆ ವೋಟರ್ ಐಡಿ

ಬೆಂಗಳೂರು: ರಾಜ್ಯದಲ್ಲಿ ವಿಶೇಷ ತೀವ್ರ ಮತದಾರರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಪೂರ್ಣಗೊಂಡ ನಂತರವೂ ಒಬ್ಬ ವ್ಯಕ್ತಿಯ ಹೆಸರು ಎರಡು ರಾಜ್ಯಗಳ ಮತದಾರರ ಪಟ್ಟಿಯಲ್ಲಿ ಕಾಣಿಸಿಕೊಂಡಿದೆ. ರಾಜ್ಯದಲ್ಲಿ ಅಂತಿಮ ಮತದಾರರ ಪಟ್ಟಿ ಬಿಡುಗಡೆಯಾದ ಬೆನ್ನಲ್ಲೇ, ಒಬ್ಬ ವ್ಯಕ್ತಿಯ ಹೆಸರು ಕರ್ನಾಟಕ ಮತ್ತು ಬಿಹಾರ ಎರಡೂ ರಾಜ್ಯಗಳ ಮತದಾರರ ಪಟ್ಟಿಯಲ್ಲಿ ಇರುವುದಾಗಿ ಹೇಳಲಾಗುತ್ತಿರುವ ಪ್ರಕರಣವೊಂದು ಭಾರೀ ಚರ್ಚೆಗೆ ಗ್ರಾಸವಾಗಿದೆ.ನಕ್ಷೆಗಳನ್ನು ನೋಡಿ

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿರುವ ಉದಯ್ ಕುಮಾರ್ ಎಂಬ ವ್ಯಕ್ತಿಯ ಹೆಸರು, ಅದೇ ಹೆಸರು ಮತ್ತು ಒಂದೇ ರೀತಿಯ ವೈಯಕ್ತಿಕ ಮಾಹಿತಿಯೊಂದಿಗೆ ಬಿಹಾರದಲ್ಲೂ




ಕಾಣಿಸಿಕೊಂಡಿದೆ ಎಂಬ ಮಾಹಿತಿ ಮುನ್ನೆಲೆಗೆ ಬಂದಿದೆ. ಬಿಹಾರದ ನಾವಡ ಜಿಲ್ಲೆಯ ಹಿಸೌ ಕ್ಷೇತ್ರದಲ್ಲೂ ಹೆಸರು!:ಬೆಂಗಳೂರಿನ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಉದಯ್ ಕುಮಾರ್ ಅವರ ಹೆಸರು ಬಿಹಾರದ ನಾವಡ ಜಿಲ್ಲೆಯ ಹಿಸೌ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲೂ ಇದೆ ಎಂದು ಹೇಳಲಾಗುತ್ತಿದೆ. ಒಂದೇ ವ್ಯಕ್ತಿಗೆ ಎರಡು ರಾಜ್ಯಗಳಲ್ಲಿ ಮತದಾನದ ಹಕ್ಕು ಲಭ್ಯವಾಗಿದೆಯೇ ಎಂಬ ಪ್ರಶ್ನೆ ಇದೀಗ ಉದ್ಭವಿಸಿದೆ.

ಕರ್ನಾಟಕದ ಅಂತಿಮ ಮತದಾರರ ಪಟ್ಟಿ ಬಿಡುಗಡೆಯಾದ ಬೆನ್ನಲ್ಲೇ ಈ ಮಾಹಿತಿ ಮುನ್ನೆಲೆಗೆ ಬಂದಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಬಿಹಾರದಲ್ಲಿ 2025ರಲ್ಲೇ ಪ್ರಕ್ರಿಯೆ ಪೂರ್ಣಗೊಂಡಿತ್ತು. ಇದೀಗ ಕರ್ನಾಟಕದ ಮತದಾರರ ಪಟ್ಟಿಯಲ್ಲೂ ಅದೇ ವ್ಯಕ್ತಿಯ ಹೆಸರು ಕಾಣಿಸಿಕೊಂಡಿರುವುದಾಗಿ ಹೇಳಲಾಗುತ್ತಿರುವುದು ಮತದಾರರ ಪಟ್ಟಿ ಪರಿಷ್ಕರಣೆಯ ವಿಶ್ವಾಸಾರ್ಹತೆ ಮತ್ತು ಪರಿಶೀಲನಾ ಪ್ರಕ್ರಿಯೆ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

# ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದ ಕಲೆ (ಡಾ. ರುಮಾದೇವಿ)

ತನ್ನ ರಾಜ್ಯದ ಸಾಂಪ್ರದಾಯಿಕ ಉಡುಗೆ ಧರಿಸಿದ್ದ ಆಕೆ ಇದೀಗ ಸರಿಸುಮಾರು 50, ಸಾವಿರ ಜನ ಮಹಿಳೆಯರನ್ನು ಸಂಘಟಿಸಿ ಅವರಿಗೆ ತರಬೇತಿ ನೀಡಿ ಸ್ವಾವಲಂಬಿಗಳನ್ನಾಗಿಸಿರುವುದನ್ನು ನೋಡಿದಾಗ ಮನಸ್ಸು ಸಂತಸದಿಂದ ನಡೆಯಿತು ಈ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆಯಲು ವಿಡಿಯೋವನ್ನು ಸಂಪೂರ್ಣವಾಗಿ ವೀಕ್ಷಿಸಿದೆ.



ಕೇವಲ ನಾಲ್ಕು ವರ್ಷದವಳು ಇದ್ದಾಗ ರುಮಾದೇವಿ ಎಂಬ ಆ ಹೆಣ್ಣು ಮಗಳು ತನ್ನ ತಾಯಿಯನ್ನು ಕಳೆದುಕೊಂಡಳು. ಮನೆಯ ಹಿರಿ ಮಗಳಾಗಿ ಇದ್ದ ಕಾರಣ ಆಕೆಯ ವಿದ್ಯಾಭ್ಯಾಸ ಎಂಟನೇ ತರಗತಿಗೆ ಮೊಟಕುಗೊಂಡಿತು. ಜೊತೆಗೆ ಮನೆಯ ಉಳಿದೆಲ್ಲ ಮಕ್ಕಳ ಕೆಲಸ ಆಕೆಯ ಪಾಲಿಗೆ ಬಂತು. ಅಂತೆಯೇ ಮನೆಯ ಎಲ್ಲಾ ಕೆಲಸ ಕಾರ್ಯಗಳಲ್ಲೂ ಆಕೆ ನುರಿತಳು. ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಪಾತ್ರೆ ತೊಳೆಯುವ, ಕಸಗುಡಿಸುವ, ನೆಲ ಒರೆಸುವ ಬಟ್ಟೆ ಒಗೆಯುವ ಅಡುಗೆ ಮಾಡುವ ಎಲ್ಲಾ ಕೆಲಸಗಳನ್ನು ಆಕೆ ಕಲಿತು ಇಡಿ ಕುಟುಂಬದ ನಿರ್ವಹಣೆಯನ್ನು ಮಾಡಲು ಆರಂಭಿಸಿದಳು. ವಿದ್ಯೆಯಂತೂ ನೈವೇದ್ಯವಾಗಿತ್ತು ಆದರೆ ಆಕೆಯ ಕಲಿಯುವ ಹುಮ್ಮಸ್ಸಿಗೆ ಜೊತೆಯಾದದ್ದು ಆಕೆಯ ಗ್ರಾಮದಲ್ಲಿ ಎಲ್ಲ ಮಹಿಳೆಯರು ತಮ್ಮ ಬಿಡುವಿನ ಸಮಯದಲ್ಲಿ. ಮಾಡುತ್ತಿದ್ದ ಕಷಿಧಾಕರಿ ಎಂಬ ಕಸೂತಿ ಕಲೆ. ತನ್ನ ಅಜ್ಜಿಯ ಪಕ್ಕದಲ್ಲಿ ಕುಳಿತುಕೊಂಡು ಆಕೆ ಬಟ್ಟೆಯ ಮೇಲೆ ಅಜ್ಜಿಯ ಬೆರಳುಗಳು ಓಡಾಡುವ ರೀತಿಯನ್ನು ಅತ್ಯಂತ ಗಮನವಿಟ್ಟು ನೋಡುತ್ತಿದ್ದಳು ... ನಿಧಾನವಾಗಿ ತಾನು ಕೂಡ ಆ ಕಲೆಯನ್ನು ಕಲಿತು ತನ್ನದಾಗಿಸಿಕೊಂಡಳು.

16ನೇ ವಯಸ್ಸಿನಲ್ಲಿ ಆಕೆಗೆ ವಿವಾಹವಾಯಿತು.... ಮುಂದಿನ ಒಂದು ವರ್ಷದಲ್ಲಿ ಗಂಡು ಮಗುವಿಗೆ ಆಕೆ ತಾಯಿಯಾದಳು. ಮಗುವಿನ ಉತ್ತಮ ಬೆಳವಣಿಗೆಗೆ ಅತ್ಯವಶ್ಯಕವಾದ ಪೋಷಕಾಂಶಗಳನ್ನು ಸೇರಿಸಲು ಆಕೆಯ ಕುಟುಂಬದ ವರಮಾನದಲ್ಲಿ ಸಾಧ್ಯವಾಗುತ್ತಿರಲಿಲ್ಲ.ಆಕೆ ತನ್ನ ಗರ್ಭಸ್ತ ಅವಧಿಯಲ್ಲಿ ಯಾವುದೇ ರೀತಿಯ ಪೋಷಕ ಆಹಾರ, ಔಷಧಿ, ಮಾತ್ರೆಗಳನ್ನು ಸೇವಿಸಲು ಸಾಧ್ಯವಾಗದೆ ಹೋಯಿತು ಪರಿಣಾಮವಾಗಿ ಆಕೆಯ ಪ್ರಸವವಾದ ನಂತರ ಹುಟ್ಟಿದ ಗಂಡು ಮಗು ಕೇವಲ 48 ಗಂಟೆಗಳಲ್ಲಿ ತೀರಿಹೋಯಿತು. ಕೇವಲ 18 ರ ಹರೆಯದಲ್ಲಿದ್ದ ಆಕೆ ವಿಧಿ ತನ್ನೊಂದಿಗೆ ಈ ರೀತಿ ಏಕೆ ಆಟವಾಡುತ್ತಿದೆ ಎಂದು ಸದಾ ಚಿಂತಿಸುತ್ತಿದ್ದಳು. ಮಗುವನ್ನು ಕಳೆದುಕೊಂಡ ನೋವಿನಿಂದ ಹೊರಬರಲು ಮುಂದಿನ ಕೆಲವೇ ತಿಂಗಳುಗಳಲ್ಲಿ ಆಕೆ ತನ್ನ ಅಜ್ಜಿಯಿಂದ ಕಲಿತ ಚಿತ್ತಾರದ ಕಸೂತಿ ಕಲೆಯನ್ನು ಬಟ್ಟೆಯ ಮೇಲೆ ಮೂಡಿಸಲು ಆರಂಭಿಸಿದಳು. ಆಕೆಯ ಚಿತ್ತಾರದ ಕಸೂತಿಗಳನ್ನು ನೋಡಿ ತಮಗೂ ಕಲಿಸಿಕೊಡು ಎಂದು ಗ್ರಾಮದ ಕೆಲ ಮಹಿಳೆಯರು ಮುಂದೆ ಬಂದರು. ಹೀಗೆ ಎಂಟು ಹತ್ತು ಜನ ಹೆಣ್ಣು ಮಕ್ಕಳು ಆಕೆಗೆ ಜೊತೆಗೂಡಿದಾಗ ಅವರೆಲ್ಲರಿಗೂ ಆಕೆ ಪ್ರತಿದಿನ ಮಧ್ಯಾಹ್ನದ ಬಿಡುವಿನ ಸಮಯದಲ್ಲಿ ಈ ಚಿತ್ತಾರದ ಕಲೆಯನ್ನು ಕಲಿಸಲು ಆರಂಭಿಸಿದಳು. ಶುಲ್ಕವಾಗಿ ಅವರು ಕೊಟ್ಟ ಅಲ್ಪ ಸ್ವಲ್ಪ ಹಣವನ್ನು ಉಳಿತಾಯ ಮಾಡಿ ಒಂದು ಸೆಕೆಂಡ್ ಹ್ಯಾಂಡ್ ಹೊಲಿಗೆ ಯಂತ್ರವನ್ನು ಆಕೆ ಖರೀದಿಸಿದಳು. ಮನೆಯಿಂದಲೇ ಚಿಕ್ಕದಾಗಿ ಕಸೂತಿ ಹೊಲಿಗೆಯ ಕಾರ್ಯವನ್ನು ಆರಂಭಿಸಿದ ರುಮಾ ಹಾಗೂ ಆಕೆಯ ತಂಡಕ್ಕೆ ದೊರೆತ ಮೊದಲ ಆರ್ಡರನ್ನು ಕೇವಲ ಮೂರು ದಿನಗಳಲ್ಲಿ ಹಗಲು ರಾತ್ರಿ ಕೆಲಸ ಮಾಡಿ ಅವರು ಪೂರೈಸಿದರು. ಇದು ಅವರಿಗೆ ದೊಡ್ಡ ದೊಡ್ಡ ಕನಸುಗಳನ್ನು ಅಗತ್ಯವಾಗಿದ್ದ ಆತ್ಮವಿಶ್ವಾಸವನ್ನು ತುಂಬಿತು. ತಮ್ಮ ಹಳ್ಳಿ ಮಾತ್ರವಲ್ಲದೆ ಇತರ ಹಳ್ಳಿಗಳಿಗೆ ಕಾಲ್ನಡಿಗೆಯಲ್ಲಿ ನಡೆದು ಹೊಸ ಹೊಸ ಆರ್ಡರ್ಗಳನ್ನು ಹಿಡಿಯಲು ಅವರು ಓಡಾಡಿದರು. 48 ಡಿಗ್ರಿ ತಾಪಮಾನದಲ್ಲಿ ಸುಡುವ ಸೂರ್ಯನ ಬಿಸಿಲಿನಲ್ಲಿ ನೀವು ಮನೆಯಿಂದ ಹೊರಗೆ ಕಾಲಿಡುವ ಅವಶ್ಯಕತೆ ಇಲ್ಲ, ನಾವೇ ನಿಮ್ಮ ಬಳಿ ಬಂದು ಆರ್ಡರ್ಗಳನ್ನು ಪಡೆದು ನಿಮ್ಮ ಕೆಲಸವನ್ನು ಮಾಡಿ ಕೊಡುತ್ತೇವೆ ಎಂದು ಅವರು ಜನರಿಗೆ ಹೇಳುತ್ತಿದ್ದರು. ಹೀಗೆಯೇ ಅವರ ಕಾರ್ಯವ್ಯಾಪ್ತಿಯನ್ನು ಹಿಗ್ಗಿಸುತ್ತ ತಮ್ಮ ಕೆಲಸವನ್ನು ಎಡಬಿಡದೆ ಮಾಡಿದರು. ದಿನೇ ದಿನೇ ಅವರ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು.

2010ರಲ್ಲಿ ದಿಲ್ಲಿಯಲ್ಲಿ ನಡೆದ ಎಕ್ಸಿಬಿಷನ್ ಒಂದರಲ್ಲಿ ಸರಿ ಸುಮಾರು ಹತ್ತರಿಂದ ಹದಿನೈದು ಸಾವಿರ ರೂಗಳಷ್ಟು ವ್ಯಾಪಾರವಾದಾಗ ಅವರ ಆತ್ಮವಿಶ್ವಾಸ ಹೆಚ್ಚಾಯಿತು.

ಮುಂದೆ ಜೈಪುರದಲ್ಲಿ ಅವರು ತಮ್ಮ ವ್ಯಾಪಾರವನ್ನು ವಿಸ್ತರಿಸಿ ಅಲ್ಲಿನ ಫ್ಯಾಶನ್ ಶೋ ಒಂದರಲ್ಲಿ ಪ್ರಚಾರ ಪಡಿಸಿದರು. ಅಲ್ಲಿ ಅವರ ಕ್ರಿಯಾಶೀಲತೆಗೆ ಸಂದ ಚಪ್ಪಾಳೆಯನ್ನು ಇನ್ನು ಮರೆಯಲು ಸಾಧ್ಯವಾಗಿಲ್ಲ ಆ ಚಪ್ಪಾಳೆ ಕೇವಲ ನನ್ನೊಬ್ಬಳ ದಾಗಿರಲಿಲ್ಲ ನಮ್ಮ ಇಡೀ ತಂಡದ್ದಾಗಿತ್ತು ಎಂದು ಆಕೆ ಹೇಳುತ್ತಾರೆ. ಪ್ರತಿಯೊಬ್ಬ ಮುಖ ಮಹಿಳೆಯ ಕೈಯಲ್ಲಿರುವ ಸೂಜಿಯದ್ದಾಗಿತ್ತು.... ಕಾರಣ ನಾವೆಲ್ಲರೂ ಜೊತೆಯಾಗಿದ್ದಾಗ ನಮ್ಮ ಒಗ್ಗಟ್ಟಿಗಿಂತ ಬಲಿಷ್ಠವಾದದ್ದು ಮತ್ತಾವುದೂ ಇಲ್ಲ ಎಂಬುದರ ಅರಿವು ನಮಗಾಗಿತ್ತು ಎಂದು ಆಕೆ ಹೆಮ್ಮೆಯಿಂದ ಹೇಳುತ್ತಾರೆ.

ಲಂಡನ್ ಫ್ಯಾಶನ್ ವೀಕ್ ನಲ್ಲಿ ಭಾಗವಹಿಸಿರುವ ಅವರು ರಾಜೀವಿಕ ( ರಾಜಸ್ಥಾನ ಲೈವ್ಲಿ ಹುಡ್ ಮಿಷನ್) ದ ಬ್ರಾಂಡ್ ಅಂಬಾಸಿಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಕೆಯ ಈ ಕಾರ್ಯ ಚಟುವಟಿಕೆಗೆ ಭಾರತ ಸರ್ಕಾರದಿಂದ 2018ರಲ್ಲಿ ನಾರಿ ಶಕ್ತಿ ಪುರಸ್ಕಾರ ದೊರೆತಿದ್ದು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ಕೂಡ ಪಡೆದುಕೊಂಡಿದ್ದಾರೆ.

ಇದೀಗ ಸರಿ ಸುಮಾರು 50 ಸಾವಿರ ಜನ ಮಹಿಳೆಯರು ಇವರೊಂದಿಗೆ ಕೈಜೋಡಿಸಿದ್ದು ಆರ್ಥಿಕವಾಗಿ ಸ್ವಾವಲಂಬನೆಯನ್ನು ಹೊಂದಿ ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದ್ದಾರೆ

ಇಂತಹ ಮಹಿಳೆಯರು ಮತ್ತಷ್ಟು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮೊಂದಿಗೆ ಕೈಜೋಡಿಸಲಿ ಎಂಬ ಆಶಯ ಅವರದ್ದು ಅಂಥವರಿಗೆ ಸದಾ ವಿಜಯ ಲಭಿಸಲಿ ಎಂಬ ಆಶಯದೊಂದಿಗೆ



ವೀಣಾ ಹೇಮಂತ್ ಗೌಡ ಪಾಟೀಲ್

# ಗೋಮಯದಿಂದ ತಯಾರಾಗುವ ವಿಭೂತಿ ಬಸವಣ್ಣನ ಆರಾಧನೆಯಲ್ಲಿ ಪವಿತ್ರತೆಯ ಸಂಕೇತ

ಭಾರತೀಯ ಸಂಸ್ಕೃತಿ ಮತ್ತು ಧಾರ್ಮಿಕ ಪರಂಪರೆಯಲ್ಲಿ ವಿಭೂತಿಗೆ ವಿಶೇಷವಾದ ಸ್ಥಾನವಿದೆ. ಶಿವನ ಆರಾಧನೆಯಲ್ಲಿ ಹಣೆಗೆ ವಿಭೂತಿ ಧರಿಸುವುದು ಕೇವಲ ಒಂದು ಆಚರಣೆಯಲ್ಲ; ಅದು ಪವಿತ್ರತೆ, ಸರಳತೆ, ವೈರಾಗ್ಯ ಮತ್ತು ಜೀವನದ ನಶ್ವರತೆಯನ್ನು ನೆನಪಿಸುವ ಸಂಕೇತವಾಗಿದೆ. ವಿಶೇಷವಾಗಿ ಗ್ರಾಮೀಣ ಮತ್ತು ಸಾಂಪ್ರದಾಯಿಕ ಧಾರ್ಮಿಕ ಆಚರಣೆಗಳಲ್ಲಿ ಗೋಮಯದಿಂದ ತಯಾರಿಸುವ ವಿಭೂತಿಗೆ ವಿಶಿಷ್ಟ ಮಹತ್ವವಿದೆ.






**ಗೋಮಯದಿಂದ ವಿಭೂತಿ ತಯಾರಿಸುವ ಪರಂಪರೆ**

ಸಾಂಪ್ರದಾಯಿಕ ವಿಧಾನದಲ್ಲಿ ಆರೋಗ್ಯಕರ ಹಸುವಿನ ಒಣಗಿದ ಗೋಮಯವನ್ನು ಸಂಗ್ರಹಿಸಿ, ಅದನ್ನು ಸೂಕ್ತ ರೀತಿಯಲ್ಲಿ ಸುಟ್ಟು ದೊರೆಯುವ ಬೂದಿಯನ್ನು ಸಂಸ್ಕರಿಸಿ ವಿಭೂತಿಯಾಗಿ ಬಳಸುವ ಪದ್ಧತಿ ಹಲವು ಪ್ರದೇಶಗಳಲ್ಲಿ ಕಂಡುಬರುತ್ತದೆ. ಈ ಬೂದಿಯನ್ನು ಸಾಮಾನ್ಯ ಬೂದಿಯಂತೆ ನೋಡದೆ, ಧಾರ್ಮಿಕ ಶುದ್ಧತೆ ಮತ್ತು ಶಿವತತ್ತ್ವದೊಂದಿಗೆ ಸಂಬಂಧಿಸಿದ ಪವಿತ್ರ ವಸ್ತುವಾಗಿ ಪರಿಗಣಿಸಲಾಗುತ್ತದೆ. ಗೋಮಯವನ್ನು ಭಾರತೀಯ ಗ್ರಾಮೀಣ ಜೀವನದಲ್ಲಿ ಬಹುಕಾಲದಿಂದಲೇ ವಿವಿಧ ರೀತಿಯಲ್ಲಿ ಬಳಸಲಾಗುತ್ತಿದೆ. ಮನೆಗಳ ನೆಲ ಮತ್ತು ಅಂಗಳದ ಸಾಂಪ್ರದಾಯಿಕ ಸ್ವಚ್ಛತೆ, ಹೋಮ-ಹವನಗಳಂತಹ ಧಾರ್ಮಿಕ ಆಚರಣೆಗಳು ಹಾಗೂ ಕೃಷಿ ಚಟುವಟಿಕೆಗಳಲ್ಲಿ ಗೋಮಯಕ್ಕೆ ಸ್ಥಾನವಿದೆ. ಇದೇ ಪರಂಪರೆಯ ಒಂದು ಭಾಗವಾಗಿ ಗೋಮಯದಿಂದ ದೊರೆಯುವ ಬೂದಿಯನ್ನು ಧಾರ್ಮಿಕವಾಗಿ ಬಳಸುವ ಪದ್ಧತಿಯೂ ಬೆಳೆದು ಬಂದಿದೆ.

**ವಿಭೂತಿ ಏನನ್ನು ಸೂಚಿಸುತ್ತದೆ**

ಶೈವ ಪರಂಪರೆಯಲ್ಲಿ ವಿಭೂತಿಗೆ ಅತ್ಯಂತ ಆಳವಾದ ತಾತ್ವಿಕ ಅರ್ಥವಿದೆ. ಮನುಷ್ಯನ ದೇಹ, ಸಂಪತ್ತು, ಅಧಿಕಾರ, ಅಹಂಕಾರ ಮತ್ತು ಭೌತಿಕ ಜೀವನ ಎಲ್ಲವೂ ಒಂದು ದಿನ ನಶ್ವರವಾಗುತ್ತವೆ ಎಂಬ ಸತ್ಯವನ್ನು ಬೂದಿ ನೆನಪಿಸುತ್ತದೆ. ಹಣೆಗೆ ವಿಭೂತಿ ಧರಿಸುವಾಗ, "ಈ ದೇಹವೂ ಒಂದು ದಿನ ಪಂಚಭೂತಗಳಲ್ಲಿ ಲೀನವಾಗಲಿದೆ" ಎಂಬ ಜೀವನದ ಸತ್ಯವನ್ನು ಸ್ಮರಿಸುವ ಸಂಕೇತವೆಂದು ಭಕ್ತರು ಭಾವಿಸುತ್ತಾರೆ. ವಿಭೂತಿಯ ಮೂರು ಗೆರೆಗಳನ್ನು ಧರಿಸುವ ತ್ರಿಪುಂಡ್ರ ಶೈವ ಸಂಪ್ರದಾಯದಲ್ಲಿ ಪ್ರಮುಖವಾಗಿದೆ. ಇದು ಶಿವನ ಆರಾಧನೆ, ಆತ್ಮಜ್ಞಾನ ಮತ್ತು ಅಹಂಕಾರದ ನಿವಾರಣೆಯೊಂದಿಗೆ ಸಂಬಂಧಿಸಿದೆ.

**ಬಸವಣ್ಣನವರ ಚಿಂತನೆ ಮತ್ತು ವಿಭೂತಿ**

ಕರ್ನಾಟಕದ ಸಾಮಾಜಿಕ ಹಾಗೂ ಧಾರ್ಮಿಕ ಇತಿಹಾಸದಲ್ಲಿ ಬಸವಣ್ಣನವರು ಅತ್ಯಂತ ಮಹತ್ವದ ವ್ಯಕ್ತಿ. 12ನೇ ಶತಮಾನದಲ್ಲಿ ಅವರು ಸಮಾಜದಲ್ಲಿ ಸಮಾನತೆ, ಕಾಯಕ, ದಾಸೋಹ ಮತ್ತು ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿದರು.

**ಬಸವಣ್ಣನವರ ವಚನ ಪರಂಪರೆಯಲ್ಲಿ ಬಾಹ್ಯ**

ಆಚರಣೆಗಿಂತ ಅಂತರಂಗದ ಶುದ್ಧತೆ ಮತ್ತು ಸತ್ಯನಿಷ್ಠ ಜೀವನಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಆದ್ದರಿಂದ ವಿಭೂತಿಯನ್ನು ಧರಿಸುವುದರ ಅರ್ಥವೂ ಕೇವಲ ಹಣೆಗೆ ಬೂದಿ ಹಚ್ಚಿಕೊಳ್ಳುವುದರಲ್ಲಿ ಸೀಮಿತವಾಗದೆ, ಅದರ ಹಿಂದಿರುವ ತಾತ್ವಿಕ ಸಂದೇಶವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಇದೆ. "ಕಾಯಕವೇ ಕೈಲಾಸ" ಎಂಬ ಬಸವಣ್ಣನವರ ಪ್ರಸಿದ್ಧ ಚಿಂತನೆ ನಮಗೆ ದುಡಿಮೆ ಮತ್ತು ಪ್ರಾಮಾಣಿಕ ಜೀವನದ ಮಹತ್ವವನ್ನು ತಿಳಿಸುತ್ತದೆ. ಅದೇ ರೀತಿ ವಿಭೂತಿ ಮನುಷ್ಯನಿಗೆ ಅಹಂಕಾರಕ್ಕಿಂತ ಸರಳತೆ ಮುಖ್ಯ ಎಂಬ ಸಂದೇಶವನ್ನು ನೀಡುತ್ತದೆ.

**ಬಸವಣ್ಣ ಮತ್ತು ಬಸವ ಸಂಸ್ಕೃತಿಯಲ್ಲಿ ಗೋವಿನ ಮಹತ್ವ**

ಕರ್ನಾಟಕದ ಗ್ರಾಮೀಣ ಬದುಕಿನಲ್ಲಿ ಹಸು ಕೇವಲ ಸಾಕುಪ್ರಾಣಿಯಲ್ಲ. ಕೃಷಿ ಆಧಾರಿತ ಸಮಾಜದಲ್ಲಿ ಹಾಲು, ಮೊಸರು, ತುಪ್ಪ ಸೇರಿದಂತೆ ಹಲವು ಉಪಯೋಗಗಳನ್ನು ನೀಡುವ ಗೋವು ಕುಟುಂಬ ಮತ್ತು ಗ್ರಾಮೀಣ ಆರ್ಥಿಕತೆಯ ಪ್ರಮುಖ ಭಾಗವಾಗಿತ್ತು. ಗೋಮಯವೂ ಗ್ರಾಮೀಣ ಜೀವನದಲ್ಲಿ ಹಲವು ಸಾಂಪ್ರದಾಯಿಕ ಬಳಕೆಗಳನ್ನು ಹೊಂದಿತ್ತು. ಹೀಗಾಗಿ ಗೋಮಯದಿಂದ ದೊರೆಯುವ ಬೂದಿಯನ್ನು ಧಾರ್ಮಿಕ ಆಚರಣೆಗಳಲ್ಲಿ ಬಳಸುವ ಪರಂಪರೆ ಗ್ರಾಮೀಣ ಸಂಸ್ಕೃತಿಯೊಂದಿಗೆ ಆಳವಾಗಿ ಬೆಸೆದುಕೊಂಡಿದೆ.

**ವಿಭೂತಿ ಭಕ್ತಿ ಮತ್ತು ತತ್ವಜ್ಞಾನದ ಸೇತುವೆ**

ವಿಭೂತಿಯನ್ನು ಧರಿಸುವ ಸಂಪ್ರದಾಯದ ವಿಶೇಷತೆ ಎಂದರೆ ಅದು ಭಕ್ತಿ ಮತ್ತು ತತ್ವಜ್ಞಾನ ಎರಡನ್ನೂ ಒಂದಾಗಿಸುತ್ತದೆ. ಬಿಳಿ ಬೂದಿಯ ಮೂರು ಗೆರೆಗಳು ಹೊರಗೆ ಸರಳವಾಗಿ ಕಾಣಿಸಿದರೂ, ಅವು ಮನುಷ್ಯನ ಒಳಗಿನ ಅಹಂಕಾರವನ್ನು ಕಡಿಮೆ ಮಾಡಿಕೊಂಡು ಸತ್ಯ, ಶುದ್ಧತೆ ಮತ್ತು ಸಾತ್ವಿಕ ಜೀವನದತ್ತ ಸಾಗುವ ಸಂದೇಶವನ್ನು ನೀಡುತ್ತವೆ. ಬಸವಣ್ಣನವರ ವಚನಗಳ ಮೂಲ ಆಶಯವೂ ಇದೇ ರೀತಿಯಲ್ಲಿ ಮನುಷ್ಯನ ಒಳಗಿನ ಪರಿವರ್ತನೆಗೆ ಒತ್ತು ನೀಡುತ್ತದೆ. ದೇವರನ್ನು ಕೇವಲ ದೇವಸ್ಥಾನದಲ್ಲಿ ಹುಡುಕುವುದಕ್ಕಿಂತ, ತನ್ನ ಕಾಯಕದಲ್ಲಿ, ನಡತೆಯಲ್ಲಿ ಮತ್ತು ಮಾನವೀಯತೆಯಲ್ಲಿ ಕಂಡುಕೊಳ್ಳಬೇಕು ಎಂಬ ಚಿಂತನೆ ಅವರ ವಚನ ಪರಂಪರೆಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

**ಇಂದಿನ ಕಾಲದಲ್ಲೂ ಉಳಿದಿರುವ ಪರಂಪರೆ**

ಆಧುನಿಕ ಜೀವನಶೈಲಿ ವೇಗವಾಗಿ ಬದಲಾಗುತ್ತಿದ್ದರೂ, ವಿಭೂತಿ ಧರಿಸುವ ಸಂಪ್ರದಾಯ ಇನ್ನೂ ಅನೇಕ ಕುಟುಂಬಗಳು ಮತ್ತು ಭಕ್ತರಲ್ಲಿ ಮುಂದುವರಿದಿದೆ. ಶಿವರಾತ್ರಿ, ಬಸವ ಜಯಂತಿ, ಸೋಮವಾರದ ಶಿವಪೂಜೆ, ದೇವಸ್ಥಾನಗಳ ಜಾತ್ರೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ವಿಭೂತಿಗೆ ವಿಶೇಷ ಸ್ಥಾನವಿದೆ. ಆದರೆ ಯಾವುದೇ ಸಾಂಪ್ರದಾಯಿಕ ವಸ್ತುವನ್ನು ಬಳಸುವಾಗ ಅದರ ತಯಾರಿಕಾ ವಿಧಾನ, ಸ್ವಚ್ಛತೆ ಮತ್ತು ಸುರಕ್ಷತೆಯ ಬಗ್ಗೆ ಗಮನ ನೀಡುವುದು ಮುಖ್ಯ. ಸಾಂಪ್ರದಾಯಿಕವಾಗಿ ತಯಾರಿಸಿದ ವಿಭೂತಿಯನ್ನು ಬಳಸುವವರು ಸ್ವಚ್ಛವಾದ ಮೂಲದಿಂದ ಪಡೆದ, ಸರಿಯಾಗಿ ಸಂಸ್ಕರಿಸಿದ ಉತ್ಪನ್ನವನ್ನೇ ಬಳಸುವುದು ಒಳಿತು.

**ಪರಂಪರೆಯ ಹಿಂದಿರುವ ಸಂದೇಶ**

ಗೋಮಯದಿಂದ ತಯಾರಾಗುವ ವಿಭೂತಿಯ ಕಥೆ ಕೇವಲ ಒಂದು ಧಾರ್ಮಿಕ ವಸ್ತುವಿನ ಕಥೆಯಲ್ಲ. ಇದು ಭಾರತೀಯ ಗ್ರಾಮೀಣ ಜೀವನ, ಗೋಸಂಸ್ಕೃತಿ, ಶಿವಭಕ್ತಿ ಮತ್ತು ತಾತ್ವಿಕ ಚಿಂತನೆಗಳ ನಡುವೆ ಇರುವ ಸಂಬಂಧವನ್ನು ತೋರಿಸುತ್ತದೆ. ವಿಭೂತಿ ನಮಗೆ ಒಂದು ಸರಳವಾದ ಆದರೆ ಆಳವಾದ ಸತ್ಯವನ್ನು ನೆನಪಿಸುತ್ತದೆ ? ಭೌತಿಕ ಜೀವನ ಶಾಶ್ವತವಲ್ಲ; ಆದರೆ ನಾವು ಬದುಕುವ ರೀತಿಯೇ ನಮ್ಮ ನಿಜವಾದ ಗುರುತು. ಬಸವಣ್ಣನವರ ಕಾಯಕ, ದಾಸೋಹ, ಸಮಾನತೆ ಮತ್ತು ಅಂತರಂಗ ಶುದ್ಧತೆಯ ಸಂದೇಶದೊಂದಿಗೆ ಈ ತಾತ್ವಿಕ ಅರ್ಥವನ್ನು ನೋಡಿದಾಗ, ವಿಭೂತಿ ಕೇವಲ ಬೂದಿಯಾಗದೆ ಒಂದು ಜೀವನದರ್ಶನದ ಸಂಕೇತವಾಗುತ್ತದೆ.

ಹಣೆಯ ಮೇಲೆ ಮೂಡುವ ಮೂರು ಬಿಳಿ ಗೆರೆಗಳು ಮನುಷ್ಯನಿಗೆ ಪ್ರತಿದಿನವೂ ಒಂದು ಸಂದೇಶ ನೀಡುತ್ತವೆ ಅಹಂಕಾರವನ್ನು ಬಿಟ್ಟು, ಸತ್ಯವನ್ನು ಅಳವಡಿಸಿಕೊಂಡು, ಪ್ರಾಮಾಣಿಕ ಕಾಯಕದ ಮೂಲಕ ಮಾನವೀಯ ಬದುಕನ್ನು ಕಟ್ಟಿಕೊಳ್ಳಬೇಕು. ಅದೇ ವಿಭೂತಿಯ ನಿಜವಾದ ಅರ್ಥ; ಅದೇ ನಮ್ಮ ಸಂಸ್ಕೃತಿಯ ಆಂತರಿಕ ಸಂದೇಶ.

ವಿನಾಯಕ ಬಿ. ತಿಪ್ಪಣ್ಣನವರ

ಈ ನಮ್ಮ ಧೃತಿ ನ್ಯೂಸ್

E NAMMA DHURTHI NEWS
KANNADA DAILY NEWS PAPER

## ನ.1ರ ಇಂಡಿಯಾ ಒಕ್ಕೂಟದ ಯಾರ್ಲಿ ಮುಂದೂಡಲು ರಾಹುಲ್‌ಗೆ ವ್ಯಾಪಾರಿಗಳಿಂದ ಮತ್ತೊಮ್ಮೆ ಪತ್ರ



ನವದೆಹಲಿ: ಬರುವ ನವೆಂಬರ್ 1ರಂದು ಇಲ್ಲಿನ ರಾಮಲೀಲಾ ಮೈದಾನದಲ್ಲಿ ನಡೆಯಲಿರುವ ಇಂಡಿಯಾ ಒಕ್ಕೂಟದ ಯಾರ್ಲಿಯಿಂದ ವ್ಯಾಪಾರ ಚಟುವಟಿಕೆಗಳಿಗೆ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ಈ ಕುರಿತು ವ್ಯಾಪಾರಿಗಳ ಆತಂಕವನ್ನು ತಿಳಿಸಲು ಮತ್ತು ಯಾರ್ಲಿಯನ್ನು ಮುಂದೂಡುವಂತೆ ಕೋರಲು ಚೇಂಬರ್ ಆಫ್ ಟ್ರೇಡ್ ಅಂಡ್ ಇಂಡಸ್ಟ್ರಿಯವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ 20 ನಿಮಿಷಗಳ ಸಭೆಗೆ ಮನವಿ ಮಾಡಿಕೊಂಡಿದ್ದಾರೆ.

ರಾಹುಲ್ ಗಾಂಧಿಯವರಿಗೆ ಬರೆದ ಪತ್ರದಲ್ಲಿ, ಚೇಂಬರ್ ಅಧ್ಯಕ್ಷ ಬ್ರಿಜೇಶ್ ಗೋಯಲ್ ಅವರು, 20 ಮಾರುಕಟ್ಟೆಗಳ ಪ್ರತಿನಿಧಿಗಳು ರಾಹುಲ್ ಗಾಂಧಿಯವರನ್ನು ಭೇಟಿಯಾಗಿ, ದೀಪಾವಳಿ ಹಬ್ಬದ ಸನಿಹದಲ್ಲಿ ನಡೆಯಲಿರುವ ಈ ಯಾರ್ಲಿಯಿಂದ ವ್ಯಾಪಾರ ಚಟುವಟಿಕೆಗಳಿಗೆ ಹೇಗೆ ತೊಂದರೆಯಾಗಲಿದೆ ಎಂಬುದನ್ನು ವಿವರಿಸಲು ಬಯಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ದೀಪಾವಳಿಯ ನಂತರ ಯಾರ್ಲಿಯನ್ನು ನಡೆಸುವಂತೆ ಕೋರಿ ಕಳೆದ ನಾಲ್ಕು ದಿನಗಳಲ್ಲಿ ರಾಹುಲ್ ಗಾಂಧಿಯವರಿಗೆ ಪತ್ರ ಬರೆದಿರುವುದು ಇದು ಎರಡನೇ ಬಾರಿಯಾಗಿದೆ. ಅಕ್ಟೋಬರ್ 24ರಂದು ಲೋಕಸಭೆಯ ವಿರೋಧ ಪಕ್ಷದ ನಾಯಕರಿಗೆ ಬರೆದ ಮೊದಲ ಪತ್ರದಲ್ಲಿ, ಯಾರ್ಲಿಯನ್ನು ಮುಂದೂಡುವುದರಿಂದ ವರ್ಷದ ಅತ್ಯಂತ ಜನನಿಬಿಡ ಅವಧಿಗಳಲ್ಲಿ ಒಂದಾದ ಈ ಸಮಯದಲ್ಲಿ ವ್ಯಾಪಾರ ಚಟುವಟಿಕೆಗಳನ್ನು ರಕ್ಷಿಸಲು ಸಹಾಯವಾಗುತ್ತದೆ ಎಂದು ತಿಳಿಸಲಾಗಿತ್ತು. ಇಂದಿನ ಪತ್ರದಲ್ಲಿ ಗೋಯಲ್ ಹೀಗೆ ಹೇಳಿದ್ದಾರೆ: “ನಮಗೆ ಸಂಘರ್ಷ ಬೇಕಿಲ್ಲ, ಸಂವಾದ ಬೇಕಿದೆ. ರಾಹುಲ್ ಜಿ ಅವರೇ ತಾವು ಎಲ್ಲರ ಮಾತುಗಳನ್ನು ಆಲಿಸುವುದಾಗಿಯೂ, ಸಣ್ಣ ವ್ಯಾಪಾರಿಗಳ ಧ್ವನಿಯನ್ನು ಕೇಳಿಸಿಕೊಳ್ಳುವುದಾಗಿಯೂ ಹೇಳುತ್ತಾರೆ. ಹೀಗಾಗಿ, 20 ಮಾರುಕಟ್ಟೆಗಳ ವ್ಯಾಪಾರಿಗಳಾದ ನಾವು ಅವರಿಂದ 20 ನಿಮಿಷಗಳ ಸಮಯವನ್ನು ಕೇಳುತ್ತಿದ್ದೇವೆ. ಇದೇ ಪ್ರಜಾಪ್ರಭುತ್ವದ ಸೌಂದರ್ಯವಾಗಿದೆ. ಯಾರ್ಲಿಯಿಂದ ವ್ಯಾಪಾರ ಹೆಚ್ಚಾಗುತ್ತದೆ ಮತ್ತು ಹೆಚ್ಚಿನ ಗ್ರಾಹಕರು ಬರುತ್ತಾರೆ ಎಂದು ರಾಹುಲ್ ಗಾಂಧಿ ಅವರು ವ್ಯಾಪಾರಿಗಳಿಗೆ ಮನವರಿಕೆ ಮಾಡಿದರೆ, ಅವರು ತಮ್ಮ ಪ್ರತಿಭಟನೆಯನ್ನು ಹಿಂಪಡೆಯಲಿದ್ದಾರೆ. ಆದರೆ, ಯಾರ್ಲಿಯಿಂದ ನಷ್ಟವಾಗುತ್ತದೆ ಎಂದು ವ್ಯಾಪಾರಿಗಳು ರಾಹುಲ್ ಗಾಂಧಿಯವರಿಗೆ ಮನವರಿಕೆ ಮಾಡಿದರೆ, ಅವರು ಯಾರ್ಲಿಯನ್ನು ದೀಪಾವಳಿಯ ನಂತರಕ್ಕೆ ಮುಂದೂಡಬೇಕು” ಎಂದು ಅವರು ತಿಳಿಸಿದ್ದಾರೆ.

## ಭಾರತೀಯ ಬ್ಯಾಂಕುಗಳಲ್ಲಿ ನಗದು ಕೊರತೆ : ಬ್ಲೂಮ್‌ಬರ್ಗ್



ನವದೆಹಲಿ: ಭಾರತೀಯ ಬ್ಯಾಂಕುಗಳಲ್ಲಿ ದಾಖಲೆಯ ನಗದು ಕಡಿಮೆಯಾಗುತ್ತಿದೆ.ಬ್ಲೂಮ್‌ಬರ್ಗ್ ಅರ್ಥಶಾಸ್ತ್ರ ಸೂಚ್ಯಂಕದ ಪ್ರಕಾರ, ಸಾಲದಾತರ ಬಳಿಯಿರುವ ಹೆಚ್ಚುವರಿ ನಿಧಿ ಸೆಪ್ಟೆಂಬರ್ ಆರಂಭದಲ್ಲಿ ಗರಿಷ್ಠ 11 ಟ್ರಿಲಿಯನ್ ರೂಪಾಯಿಗಳಿಂದ (116 ಶತಕೋಟಿ) ಅಕ್ಟೋಬರ್ 26 ರ ವೇಳೆಗೆ 462 ಶತಕೋಟಿ ರೂಪಾಯಿಗಳಿಗೆ ಕುಗ್ಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಈ ತಿಂಗಳ ಆರಂಭದಲ್ಲಿ ರೂಪಾಯಿ ದಾಖಲೆಯ ಕನಿಷ್ಠ ಮಟ್ಟವನ್ನು ತಲುಪುತ್ತಿದ್ದಂತೆ ಅದನ್ನು ರಕ್ಷಿಸಲು ವ್ಯಾಪಕ ಕ್ರಮಗಳನ್ನು ತೆಗೆದುಕೊಂಡ ನಂತರ ಹಿಂಡುವಿಕೆ ತೀವ್ರಗೊಂಡಿದೆ. ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಮತ್ತು ಎಮ್‌ಕೆ ಗ್ಲೋಬಲ್ ಫೈನಾನ್ಷಿಯಲ್ ಸರ್ವೀಸಸ್‌ನ ವಿಶ್ಲೇಷಕರು ಬಿಕ್ಕಟ್ಟು ಮುಂದುವರಿಯುತ್ತದೆ ಎಂದು ನಿರೀಕ್ಷಿಸುತ್ತಾರೆ, ಬ್ಯಾಂಕಿಂಗ್ ವ್ಯವಸ್ಥೆಯ ದ್ರವ್ಯತೆಯನ್ನು ಸಂಪೂರ್ಣವಾಗಿ ತುಂಬಲು ಭಾರತೀಯ ರಿಸರ್ವ್ ಬ್ಯಾಂಕ್ ಹಿಂಜರಿಯುತ್ತಿದೆ ಎಂದು ಹೇಳುತ್ತಾರೆ. ಎಮ್‌ಕೆ ಗ್ಲೋಬಲ್ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಮಾಧವಿ ಅರೋರಾ ಹೇಳಿದರು. ಹೆಚ್ಚಿನ ಸಾಲ ವೆಚ್ಚಗಳು ವ್ಯಾಪಾರಿಗಳು ರೂಪಾಯಿಗಳನ್ನು ಎರವಲು ಪಡೆಯಲು ಮತ್ತು ಡಾಲರ್‌ಗಳನ್ನು ಖರೀದಿಸಲು ಹೆಚ್ಚು ದುಬಾರಿಯಾಗುವಂತೆ ಮಾಡುವುದರಿಂದ, ಮತ್ತಷ್ಟು ರೂಪಾಯಿ ದೌರ್ಬಲ್ಯದ ವಿರುದ್ಧ ಹೆಡ್ಜಿಂಗ್ ಮತ್ತು ಕರೆನ್ಸಿ ವಿರುದ್ಧ ಬೆಟ್ಟಿಂಗ್ ವೆಚ್ಚವನ್ನು ಹೆಚ್ಚಿಸಲು ಆರ್‌ಬಿಐನ ಕ್ರಮಗಳು ವಿನ್ಯಾಸಗೊಳಿಸಲಾಗಿದೆ ಎಂದು ತೋರುತ್ತದೆ ಎಂದು ಅವರು ಹೇಳಿದರು. ಇದುವರೆಗೆ ದ್ರವ್ಯತೆ ಬೆಂಬಲವನ್ನು 1.5 ಟ್ರಿಲಿಯನ್ ರೂಪಾಯಿಗಳಿಗೆ ಮಿತಿಗೊಳಿಸಿದೆ, ಬೇಡಿಕೆ ಲಭ್ಯವಿರುವ ಮೊತ್ತವನ್ನು ಮೀರಿದ ದಿನಗಳಲ್ಲಿ ಹೆಚ್ಚಿನ ಹಣವನ್ನು ನೀಡುವುದನ್ನು ತಡೆಯುತ್ತದೆ.ಹಣಕಾಸು–ಸ್ಥಿರತೆಯ ಅಪಾಯಗಳನ್ನು ಪರಿಹರಿಸಲು ಕೆಲವೊಮ್ಮೆ ಹಣಕಾಸು ನೀತಿಯನ್ನು ಬಳಸಬಹುದು ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದರು. ಬಡ್ಡಿದರಗಳು ಕೇಂದ್ರ ಬ್ಯಾಂಕಿನ ಕರೆನ್ಸಿ–ರಕ್ಷಣಾ ಪರಿಕರಗಳ ಭಾಗವಾಗಬಹುದೇ ಎಂದು ಕೇಳಿದಾಗ, ದರ ನಿಗದಿಪಡಿಸುವ ಸಮಿತಿಯು ಖಂಡಿತವಾಗಿಯೂ ಉದ್ದೇಶಪೂರ್ವಕವಾಗಿ ಮಾಡುವ ವಿಷಯ ಎಂದು ಅವರು ಹೇಳಿದರು. ನಗದು ಕೊರತೆಯು ದೇಶೀಯ ಹಣಕಾಸು ಮಾರುಕಟ್ಟೆಗಳಲ್ಲಿಯೂ ಹರಡುತ್ತಿದೆ. ಹೊಸ ಮೂರು ಮತ್ತು ಆರು ತಿಂಗಳ ಠೇವಣಿ ಪ್ರಮಾಣಪತ್ರಗಳ ಮೇಲಿನ ದರಗಳು ಕಳೆದ ವಾರ ಸುಮಾರು 40–50 ಬೇಸಿಸ್ ಪಾಯಿಂಟ್‌ಗಳಷ್ಟು ಏರಿಕೆಯಾಗಿ ಏಳು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಹೆಚ್ಚಿನ ಬ್ಯಾಂಕ್ ಹಣಕಾಸು ವೆಚ್ಚಗಳು, ಪ್ರತಿಯಾಗಿ, ಬ್ಯಾಂಕೇತರ ಸಾಲದಾತರು ಹಣವನ್ನು ಸಂಗ್ರಹಿಸಲು ಹೆಚ್ಚು ದುಬಾರಿಯಾಗಬಹುದು. ಇಲ್ಲಿಂದ ದರಗಳು ಎಲ್ಲಿಗೆ ಹೋಗುತ್ತವೆ ಎಂಬುದರ ಕುರಿತು ಸಾಕಷ್ಟು ಅನಿಶ್ಚಿತತೆಯಿದೆ, ಆದರೆ ಮ್ಯಾಕ್ರೋ ಪರಿಸ್ಥಿತಿ ಹಾಗೆಯೇ ಇದ್ದರೆ ಮತ್ತು ಕಚ್ಚಾ ತೈಲ ಬೆಲೆಗಳು ಇಂಚು ಹೆಚ್ಚಾದರೆ, ಹೂಡಿಕೆದಾರರು ತಮ್ಮ ಹೂಡಿಕೆಗಳ ಮೇಲೆ ಪ್ರೀಮಿಯಂ ಅನ್ನು ಬಯಸುತ್ತಾರೆ ಎಂದು ಬ್ಯಾಂಕೇತರ ಸಾಲದಾತ ಕ್ಯಾಪ್ರಿ ಗ್ಲೋಬಲ್ ಕ್ಯಾಪಿಟಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅಜಯ್ ಮಂಗ್ಲುನಿಯಾ ಹೇಳಿದರು.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ‘ಅರ್ನಬ್’ ಚಂಡಮಾರುತದ ಆರ್ಭಟಕ್ಕೆ ದಕ್ಷಿಣ ಮತ್ತು ಪೂರ್ವ ರಾಜ್ಯಗಳು ತತ್ತರ



ವಿಶಾಖಪಟ್ಟಣಂ: ಅರ್ನಬ್ ಚಂಡಿಯ ಆರ್ಭಟಕ್ಕೆ ದಕ್ಷಿಣ ಹಾಗೂ ಪೂರ್ವ ರಾಜ್ಯಗಳು ತತ್ತರಿಸಿ ಹೋಗಿವೆ. ಚಂಡ ಮಾರುತದಿಂದಾಗಿ ಆಂಧ್ರ, ತೆಲಂಗಾಣ, ತಮಿಳುನಾಡು ಹಾಗೂ ಪುದುಚೇರಿಯಲ್ಲಿ ಸಾಕಷ್ಟು ಅನಾಹುತಗಳು ಸಂಭವಿಸಿವೆ. ಇದರ ಪರಿಣಾಮ ನೆರೆಯ ರಾಜ್ಯಗಳಾದ ಒಡಿಶಾ, ಉತ್ತರಪ್ರದೇಶಗಳಿಗೂ ತಟ್ಟಿದೆ. ಬಂಗಾಳಕೊಲ್ಲಿಯ ವಾಯುಭಾರ ಕುಸಿತದಿಂದಾಗಿ ಭೀಕರ ಸ್ವರೂಪ ಪಡೆದುಕೊಂಡಿರುವ ಅರ್ನಬ್ ಚಂಡಮಾರುತ ಇಂದು ಮುಂಜಾನೆ ಆಂಧ್ರಪ್ರದೇಶ ಕರಾವಳಿ ಪ್ರದೇಶಕ್ಕೆ ಅಪ್ಪಳಿಸಿದೆ. ಇದರ ಪರಿಣಾಮವಾಗಿ ದಕ್ಷಿಣ ಮತ್ತು ಪೂರ್ವ ಭಾರತದ ಕರಾವಳಿ ತೀರದಲ್ಲಿ ಧಾರಾಕಾರ ಮಳೆಯಾಗುತ್ತಿದ್ದು, ಕಡಲತೀರಗಳಲ್ಲಿ ಬೃಹತ್ ಗಾತ್ರದ ಅಲೆಗಳು ದಡಕ್ಕೆ ಅಪ್ಪಳಿಸುತ್ತಿವೆ.

ಬಂಗಾಳಿ ಭಾಷೆಯಲ್ಲಿ ಸಮುದ್ರ ಎಂಬ ಅರ್ಥವನ್ನು ಹೊಂದಿರುವ ಈ ಅರ್ನಬ್ ಚಂಡಮಾರುತ ಆಂಧ್ರದ ಬಾಪಟ್ಲಾ ಮತ್ತು ವಿಶಾಖಪಟ್ಟಣಂ ನಡುವೆ ಯಾಣಂ ಕರಾವಳಿಯನ್ನು ಪ್ರವೇಶಿಸುತ್ತಿದೆ. ಈ ವೇಳೆ ಗಂಟೆಗೆ 125 ರಿಂದ 135 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಗರಿಷ್ಠ 150 ಕಿ.ಮೀ ವೇಗದವರೆಗೆ ಬೀಸುವ ಸಾಧ್ಯತೆಯಿದೆ. ಈ ಪ್ರಕ್ರಿಯೆಯು ಮುಂದಿನ ಮೂರು ಗಂಟೆಗಳ ಕಾಲ ಮುಂದುವರಿಯಲಿದ್ದು, ಬಳಿಕ ಚಂಡಮಾರುತದ ತೀವ್ರತೆ ಕ್ರಮೇಣ ಕ್ಷೀಣಿಸಲಿದೆ ಎಂದು ಹವಾಮಾನ ಇಲಾಖೆಯ ಗಂಟೆಯ ಬುಲೆಟಿನ್ ತಿಳಿಸಿದೆ.

ಚಂಡಮಾರುತ ಅಪ್ಪಳಿಸುತ್ತಿದ್ದಂತೆ ಕಾಕಿನಾಡದಲ್ಲಿ ಹಲವೆಡೆ ಬೃಹತ್ ಮರಗಳು ಹಾಗೂ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ವಿಶಾಖಪಟ್ಟಣಂನಲ್ಲಿಯೂ ಬಿರುಗಾಳಿ–ಮಳೆಗೆ ಮರಗಳು ಉರುಳಿಬಿದ್ದು ಬೀಚ್ ರಸ್ತೆ ಹಾಗೂ ಸೀತಮ್ಮಧಾರ ಪ್ರದೇಶಗಳಲ್ಲಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ. ವಿಶಾಖಪಟ್ಟಣಂ ಹಾಗೂ ಅನಕಾಪಲ್ಲಿ ಜಿಲ್ಲೆಗಳ ಹಲವೆಡೆ 200 ಮಿ.ಮೀ ಗೂ ಅಧಿಕ ಭಾರೀ ಮಳೆ ದಾಖಲಾಗಿದೆ. ಚಂಡಮಾರುತದ ಪರಿಣಾಮ ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲೂ ಭಾರಿ ಮಳೆ ಮತ್ತು ಗಾಳಿ ಮುಂದುವರಿದಿದೆ. ಆಂಧ್ರಪ್ರದೇಶ, ತಮಿಳುನಾಡು, ಒಡಿಶಾ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಮುಂದಿನ 4 ದಿನಗಳ ಕಾಲ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ಪರಿಸ್ಥಿತಿಯ ಗಂಭೀರತೆಯನ್ನು ಗಮನಿಸಿ ದಕ್ಷಿಣ ಹಾಗೂ ಪೂರ್ವದ ರಾಜ್ಯಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಕಡಲು ಪ್ರಕ್ಷುಬ್ಧವಾಗಿರುವ ಹಿನ್ನೆಲೆಯಲ್ಲಿ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಕಟ್ಟುನಿಟ್ಟಿನ ನಿಷೇಧ ಹೇರಲಾಗಿದೆ ಮತ್ತು ಕರಾವಳಿಯ ಪ್ರವಾಸೋದ್ಯಮ ತಾಣಗಳನ್ನು ಮುಚ್ಚಲಾಗಿದೆ. ಸುರಕ್ಷತೆಯ ದೃಷ್ಟಿಯಿಂದ ಕರಾವಳಿ ಭಾಗದ ಪ್ರಮುಖ ಮಾರ್ಗಗಳಲ್ಲಿ ರಸ್ತೆ ಸಂಚಾರವನ್ನು ಕಡಿತಗೊಳಿಸಲಾಗಿದೆ.ರೈಲ್ವೆ ಹಾಗೂ ವಿಮಾನಯಾನ ಸೇವೆಗಳ ಮೇಲೆ ಚಂಡಮಾರುತ ತೀವ್ರ ಹೊಡೆತ ನೀಡಿದ್ದು, ಮುನ್ನೆಚ್ಚರಿಕೆಯಾಗಿ 50ಕ್ಕೂ ಹೆಚ್ಚು ರೈಲುಗಳು ಹಾಗೂ 30ಕ್ಕೂ ಹೆಚ್ಚು ವಿಮಾನ ಸಂಚಾರವನ್ನು ರದ್ದುಗೊಳಿಸಲಾಗಿದೆ.

ವಿಮಾನ, ರೈಲು ಸೇವೆ ಬಂದ್; ರೆಡ್ ಅಲರ್ಟ್ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ಉತ್ತರ ಕರಾವಳಿ ಜಿಲ್ಲೆಗಳು ಮತ್ತು ತಗ್ಗು ಪ್ರದೇಶಗಳಲ್ಲಿ ಅತ್ಯಂತ ಭಾರಿ ಮಳೆಯಾಗಲಿದೆ. ಅರ್ನಬ್ ಚಂಡಮಾರುತದಿಂದ ಆಂಧ್ರಪ್ರದೇಶ, ಒಡಿಶಾದಲ್ಲಿ ಭಾರಿ ಮಳೆ; ವಿಮಾನ, ರೈಲು ಸೇವೆ ರದ್ದುಗೊಳಿಸಲಾಗಿದೆ.ಚಂಡಮಾರುತದ ಭೀತಿಯ ಹಿನ್ನೆಲೆಯಲ್ಲಿ ಕನಿಷ್ಠ 65 ರೈಲುಗಳು ಮತ್ತು 21 ವಿಮಾನ ಸೇವೆಗಳನ್ನು ರದ್ದುಗೊಳಿಸಲಾಗಿದೆ. ಚಂಡಮಾರುತವು ಆಂಧ್ರಪ್ರದೇಶಕ್ಕೆ ಪ್ರವೇಶಿಸಿದಂತೆ ಪಶ್ಚಿಮ ಬಂಗಾಳ, ಜಾರ್ಖಂಡ್, ಛತ್ತೀಸ್‌ಗಢ ಮತ್ತು ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ಚಂಡಮಾರುತದ ಹಿನ್ನೆಲೆಯಲ್ಲಿ ಆಂಧ್ರಪ್ರದೇಶ ಮತ್ತು ಒಡಿಶಾಗಳಲ್ಲಿ ಸುಮಾರು 4,000 ಚಂಡಮಾರುತ ಆಶ್ರಯ ತಾಣಗಳನ್ನು ತೆರೆಯಲಾಗಿದ್ದು, ಲಕ್ಷಾಂತರ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುತ್ತಿದೆ. ಆಂಧ್ರಪ್ರದೇಶ, ಪುದುಚೇರಿ ಹಾಗೂ ಓಡಾಶಾದ ಹಲವಾರು ಜಿಲ್ಲೆಗಳಲ್ಲಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಅನಕಾಪಲ್ಲಿ ಜಿಲ್ಲೆಯಲ್ಲಿ 3 ದಿನಗಳ ಕಾಲ ರಜೆ ವಿಸ್ತರಿಸಲಾಗಿದೆ. ಆಂಧ್ರಪ್ರದೇಶದಲ್ಲಿ ಅಪಾಯಕಾರಿ ಪ್ರದೇಶಗಳಿಂದ ಈಗಾಗಲೇ 50,000ಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಆಶ್ರಯ ತಾಣಗಳಿಗೆ ರವಾನಿಸಲಾಗಿದ್ದು, ಒಟ್ಟು 4 ಲಕ್ಷ ಜನರನ್ನು ಸ್ಥಳಾಂತರಿಸುವ ಕಾರ್ಯಾಚರಣೆ ಬಿರುಸಿನಿಂದ ಸಾಗಿದೆ. ಆಂಧ್ರಪ್ರದೇಶ ಮತ್ತು ನೆರೆಯ ಒಡಿಶಾಗಳಲ್ಲಿ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ಅಗ್ನಿಶಾಮಕ ದಳದ ನೂರಾರು ತಂಡಗಳು ಸಜ್ಜಾಗಿವೆ. ಆಂಧ್ರದಲ್ಲಿ 2,100ಕ್ಕೂ ಹೆಚ್ಚು ಚಂಡಮಾರುತ ಆಶ್ರಯ ಕೇಂದ್ರಗಳನ್ನು ತೆರೆಯಲಾಗಿದ್ದು, 1,000ಕ್ಕೂ ಹೆಚ್ಚು ವೈದ್ಯಕೀಯ ತಂಡಗಳನ್ನು ರಕ್ಷಣಾ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ.

ಗಂಟೆಗೆ 125 ರಿಂದ 135 ಕಿಲೋಮೀಟರ್ ವೇಗದಲ್ಲಿ ಬೀಸಿದ ಬಿರುಗಾಳಿಯು ಹಲವೆಡೆ ಗರಿಷ್ಠ 150 ಕಿಲೋಮೀಟರ್ ವೇಗವನ್ನು ತಲುಪಿದೆ. ಚಂಡಮಾರುತದ ಅಬ್ಬರಕ್ಕೆ ಆಂಧ್ರಪ್ರದೇಶ ಕರಾವಳಿ ಮಾತ್ರವಲ್ಲದೆ ಪಕ್ಕದ ಒಡಿಶಾ, ತೆಲಂಗಾಣ, ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನ ಕರಾವಳಿ ಭಾಗಗಳಲ್ಲಿಯೂ ಧಾರಾಕಾರ ಮಳೆ ಸುರಿಯುತ್ತಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಭಾರತೀಯ ಹವಾಮಾನ ಇಲಾಖೆ ನೀಡಿರುವ ಮುನ್ಸೂಚನೆಯಂತೆ, ಭೂಕುಸಿತ ಪ್ರಕ್ರಿಯೆಯು ಮುಂದಿನ ಮೂರು ಗಂಟೆಗಳ ಕಾಲ ಮುಂದುವರಿಯಲಿದ್ದು, ಚಂಡಮಾರುತವು ನಿಧಾನವಾಗಿ ವಾಯುವ್ಯ ದಿಕ್ಕಿನಿಂದ ಉತ್ತರ–ವಾಯುವ್ಯಕ್ಕೆ ಸಾಗಿ ತೆಲಂಗಾಣದತ್ತ ಚಲಿಸುವ ವೇಳೆ ಕ್ರಮೇಣ ದುರ್ಬಲಗೊಳ್ಳಲಿದೆ.ಕಾಕಿನಾಡ, ಕೋನಸೀಮಾ, ಅನಕಾಪಲ್ಲಿ ಮತ್ತು ವಿಶಾಖಪಟ್ಟಣಂ ಜಿಲ್ಲೆಗಳಲ್ಲಿ ನೂರಾರು ಮರಗಳು ಹಾಗೂ ಸಾವಿರಾರು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ರಾಷ್ಟ್ರೀಯ ಹೆದ್ದಾರಿ 216 ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಮರಗಳು ಬಿದ್ದು ವಾಹನ ಸಂಚಾರ ಸ್ಥಗಿತಗೊಂಡಿದೆ. ಇಂದು ನಸುಕಿನ ಜಾವದವರೆಗೆ ವಿಶಾಖಪಟ್ಟಣದಲ್ಲಿ ಬರೋಬ್ಬರಿ 216.9 ಮಿ.ಮೀ ಮಳೆಯಾಗಿದೆ.ಕರಾವಳಿಯಲ್ಲಿ 1.5 ರಿಂದ 2.5 ಮೀಟರ್ ಎತ್ತರದ ಬೃಹತ್ ಅಲೆಗಳು ಏಳುತ್ತಿದ್ದು, ಯಾನಂ ಸಮೀಪದ ಸವತ್ರಿ ನಗರದಲ್ಲಿ ಸಮುದ್ರದ ನೀರು ನುಗ್ಗಿ ಪರಿಹಾರ ಕೇಂದ್ರಗಳಿಗೂ ಹಾನಿಯಾಗಿದೆ. ಒಡಿಶಾದ ಗಜಪತಿ, ಗಂಜಾಂ, ರಾಯಗಡ, ಕೊರಾಪುಟ್, ನಬರಂಗ್‌ಪುರ ಮತ್ತು ಮಲ್ಕಂಗಿರಿ ಜಿಲ್ಲೆಗಳಿಗೆ ತೀವ್ರ ಮಳೆಯ ಎಚ್ಚರಿಕೆ ನೀಡಲಾಗಿದೆ. ಇಲ್ಲಿ ಗಂಟೆಗೆ 60 ರಿಂದ 90 ಕಿ.ಮೀ ವೇಗದಲ್ಲಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ. ಪ್ರಾಣಹಾನಿ ಇಲ್ಲ; ಚಂಡಮಾರುತದ ಹಿನ್ನೆಲೆಯಲ್ಲಿ ಇಲ್ಲಿಯವರೆಗೆ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ತಿಳಿಸಿದ್ದಾರೆ. ಆಡಳಿತ ಯಂತ್ರವು ಕೈಗೊಂಡ ಮುಂಜಾಗ್ರತಾ ಕ್ರಮಗಳೇ ಪ್ರಾಣಹಾನಿಯನ್ನು ತಡೆಯಲು ಕಾರಣ ಎಂದು ಅವರು ಹೇಳಿದ್ದಾರೆ.ಸಿಎಂ ರೈಲು ಜಿಲ್ಲಾಧಿಕಾರಿಗಳು ಸೇರಿದಂತೆ 32,000 ಸಿಬ್ಬಂದಿಯೊಂದಿಗೆ ನಡೆಸಿದ ಟೆಲಿ ಕಾನ್ಫರೆನ್?ಸನಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ಆಸ್ತಿಪಾಸ್ತಿ ಹಾನಿಯನ್ನು ಕನಿಷ್ಠಗೊಳಿಸಲು ಮತ್ತು ಚಂಡಮಾರುತ ಪೀಡಿತ ಪ್ರದೇಶಗಳಲ್ಲಿ ಆದಷ್ಟು ಬೇಗ ಸಹಜ ಸ್ಥಿತಿಯನ್ನು ಮರಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಬಿದ್ದ ಮರಗಳಿಂದ ತಡೆಯುಂಟಾಗಿರುವ ರಸ್ತೆಗಳನ್ನು ಎರಡು ಗಂಟೆಗಳ ಒಳಗೆ ತೆರವುಗೊಳಿಸುವಂತೆ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ಅಡ್ಡಿಯಾಗಿರುವ ಮರಗಳನ್ನು ತಕ್ಷಣವೇ ತೆಗೆದುಹಾಕುವಂತೆ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೆ, ಬಲವಾದ ಗಾಳಿಯ ವೇಗ ತಗ್ಗಿದ ನಂತರ ಪೀಡಿತ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯನ್ನು ಪುನಃಸ್ಥಾಪಿಸುವಂತೆ ಅವರು ನಿರ್ದೇಶಿಸಿದರು.

ಚಂಡಮಾರುತ ಪರಿಹಾರ ಕೇಂದ್ರಗಳಲ್ಲಿ ಸಾಕಷ್ಟು ಆಹಾರ, ಕುಡಿಯುವ ನೀರು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಅಗತ್ಯವನ್ನು ನಾಯ್ಡು ಒತ್ತಿ ಹೇಳಿದರು. ಕೃಷಿ ಜಮೀನುಗಳಿಗೆ ನೀರು ನುಗ್ಗದಂತೆ ತಡೆಯಲು, ತೋಟಗಾರಿಕಾ ಬೆಳೆಗಳನ್ನು ರಕ್ಷಿಸಲು ಹಾಗೂ ಕೆರೆಗಳು ಮತ್ತು ಕಾಲುವೆಗಳಲ್ಲಿ ಒಡೆತ ಉಂಟಾಗದಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ಬೆಳೆ ಹಾನಿಯ ಪ್ರಾಥಮಿಕ ಅಂದಾಜನ್ನು ಸಿದ್ಧಪಡಿಸುವಂತೆ ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ ಸಿಬ್ಬಂದಿಯನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸುವಂತೆ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ತಿಳಿಸಿದರು. ಇದಲ್ಲದೆ, ಚಂಡಮಾರುತ ಪೀಡಿತ ಪ್ರದೇಶಗಳಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸಲು ಮನಮಿತ್ರ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಂತೆ ಮತ್ತು ದೂರುದಾರರಿಗೆ ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

# ದೇವಾಲಯಗಳಿಗೆ ಹಿಂದೂಗಳಲ್ಲದವರ ಪ್ರವೇಶಕ್ಕೆ ಷರತ್ತುಗಳನ್ನು ವಿಧಿಸಿದ ಮದ್ರಾಸ್ ಹೈಕೋರ್ಟ್



ಚೆನ್ನೈ: ಇತರ ಧರ್ಮಗಳ ಧಾರ್ಮಿಕ ಚಿಹ್ನೆಗಳನ್ನು ಹೊಂದಿರುವ ಮತ್ತು ಸಂಬಂಧಪಟ್ಟ ದೇವರಿಗೆ ಭಕ್ತಿಯನ್ನು ದೃಢೀಕರಿಸದ ಹಿಂದೂಯೇತರರನ್ನು ಆಗಮಿಕ್ ದೇವಾಲಯಗಳ ಆವರಣಕ್ಕೂ ಅನುಮತಿಸಲಾಗುವುದಿಲ್ಲ ಎಂದು ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠ ಮಹತ್ವದ ತೀರ್ಪು ನೀಡಿದೆ,

ದೇವಾಲಯಗಳ ಧ್ವಜಸ್ತಂಭವನ್ನು ದಾಟಲು ಬಯಸುವ ಹಿಂದೂಯೇತರರು ದೇವರಲ್ಲಿ ತಮ್ಮ ನಂಬಿಕೆಯನ್ನು ದೃಢೀಕರಿಸಬೇಕು ಮತ್ತು ದೇವಾಲಯದ ಪದ್ಧತಿಗಳನ್ನು ಅನುಸರಿಸಲು ಒಪ್ಪಿಕೊಳ್ಳಬೇಕು. ನ್ಯಾಯಾಲಯವು ಈಗ ಇತರ ಧರ್ಮಗಳ ಧಾರ್ಮಿಕ ಚಿಹ್ನೆಗಳನ್ನು ಧರಿಸುವ ಮತ್ತು ದೇವರಿಗೆ ಭಕ್ತಿಯನ್ನು ದೃಢೀಕರಿಸದ ಹಿಂದೂಯೇತರರನ್ನು ದೇವಾಲಯದ ಆವರಣಕ್ಕೂ ಅನುಮತಿಸಲಾಗುವುದಿಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಸಂಬಂಧಪಟ್ಟ ದೇವಾಲಯವು ಸೂಚಿಸಿದ ಸ್ವರೂಪದಲ್ಲಿ ಭಕ್ತಿಯ ಘೋಷಣೆಯನ್ನು ಮಾಡಬೇಕು.ಈ ಆದೇಶವು ಬೇರೆ ಧರ್ಮದ ಚಿಹ್ನೆಗಳನ್ನು ಧರಿಸುವ ಪ್ರತಿಯೊಬ್ಬರ ಮೇಲೆ ಅನರ್ಹ ನಿಷೇಧವನ್ನು ವಿಧಿಸುವುದಿಲ್ಲ. ಆದಾಗ್ಯೂ, ಅಂತಹ ಗುರುತುಗಳನ್ನು ಧರಿಸುವುದನ್ನು ಮುಂದುವರಿಸುವ ಹಿಂದೂಯೇತರರಿಗೆ ನಿಗದಿತ ಒಪ್ಪಂದಕ್ಕೆ ಸಹಿ ಮಾಡಿದ ನಂತರ ಪ್ರವೇಶವನ್ನು ಅನುಮತಿಸಲಾಗುತ್ತದೆಯೇ ಎಂದು ನ್ಯಾಯಾಲಯವು ಸ್ಪಷ್ಟವಾಗಿ ಸ್ಪಷ್ಟಪಡಿಸಿಲ್ಲ. ನ್ಯಾಯಮೂರ್ತಿಗಳಾದ ಜಿ.ಆರ್. ಸ್ವಾಮಿನಾಥನ್ ಮತ್ತು ಪಿ. ಮುರುಗನ್ ಅವರ ವಿಭಾಗೀಯ ಪೀಠವು ದೇವಾಲಯ ಪ್ರವೇಶವನ್ನು ನಿಯಂತ್ರಿಸುವ ಕಾನೂನುಗಳನ್ನು ಜಾರಿಗೊಳಿಸಲು ಮತ್ತು ಅಗಾಮಿಕ್ ತಡೆಯಾಜ್ಞೆಗಳನ್ನು ಪಾಲಿಸಲು ಕೋರಿ ಸಲ್ಲಿಸಲಾದ ಅರ್ಜಿಯನ್ನು ಅನುಮತಿಸುತ್ತಾ ಈ ಆದೇಶವನ್ನು ನೀಡಿತು. ಭಕ್ತರ ಪ್ರತಿಭಟನೆಯ ಹೊರತಾಗಿಯೂ ಜನರು ತಲೆಬುರುಡೆ ಟೋಪಿಗಳನ್ನು ಧರಿಸಿ ತಿರುವಣ್ಣಾಮಲೈನಲ್ಲಿರುವ ಅರುಣಾಚಲೇಶ್ವರ ದೇವಾಲಯಕ್ಕೆ ಪ್ರವೇಶಿಸುತ್ತಿರುವುದನ್ನು ತೋರಿಸುವ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾದ ವೀಡಿಯೊವನ್ನು ನ್ಯಾಯಾಧೀಶರು ಉಲ್ಲೇಖಿಸಿದರು. ದೇವಾಲಯದ ಸಿಬ್ಬಂದಿ ಮೂಕ ಪ್ರೇಕ್ಷಕರಾಗಿ ಉಳಿದಿದ್ದಾರೆ ಎಂದು ನ್ಯಾಯಾಲಯ ಟೀಕಿಸಿತು.

ರಾಜಕೀಯ ವ್ಯಕ್ತಿಗಳನ್ನು ಒಳಗೊಂಡ ಪ್ರಕರಣಗಳನ್ನು ಸಹ ಆದೇಶವು ಉಲ್ಲೇಖಿಸಿದೆ. ಮಧುರೈ ಸೆಂಟ್ರಲ್ ಶಾಸಕ ಬದ್ರುದೀನ್ ಮುಸ್ತಫಾ ಚುನಾವಣೆಯ ನಂತರ ಮೀನಾಕ್ಷಿ ದೇವಾಲಯಕ್ಕೆ ಪ್ರವೇಶಿಸಿ, ಸೌಲಭ್ಯಗಳನ್ನು ಪರಿಶೀಲಿಸುವ ಹಕ್ಕನ್ನು ಪ್ರತಿಪಾದಿಸಿದರು ಮತ್ತು ಕುಂಭಾಭಿಷೇಕದ ಸಮಯದಲ್ಲಿ ದೇವಾಲಯದ ಗೋಪುರಗಳನ್ನು ಹತ್ತಿದರು. ಕ್ರಿಶ್ಚಿಯನ್ ಮಂತ್ರಿಯೊಬ್ಬರು ಅಗತ್ಯವಿರುವ ಜವಾಬ್ದಾರಿಯನ್ನು ನೀಡದೆ ತಿರುಚೆಂಡೂರ್ ದೇವಾಲಯಕ್ಕೆ ಪ್ರವೇಶಿಸಿದ್ದಾರೆ ಎಂದು ನ್ಯಾಯಾಧೀಶರು ಗಮನಿಸಿದರು. ಇದಕ್ಕೆ ವ್ಯತಿರಿಕ್ತವಾಗಿ, ನ್ಯಾಯಾಲಯವು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರನ್ನು ಉಲ್ಲೇಖಿಸಿತು, ಅವರು ನಂಬಿಕೆಯಿಂದ ಕ್ರಿಶ್ಚಿಯನ್ ಆಗಿದ್ದರೂ, ಒಪ್ಪಂದಕ್ಕೆ ಸಹಿ ಹಾಕಿದ ನಂತರ ಮೀನಾಕ್ಷಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಅವರನ್ನು ಮತಾಂತರಿಸಲು ಕೇಳಲಾಗಿಲ್ಲ, ಆದರೆ ದೇವರ ಮೇಲಿನ ಭಕ್ತಿಯನ್ನು ದೃಢೀಕರಿಸಲು ಮಾತ್ರ ಕೇಳಲಾಗಿದೆ ಎಂದು ನ್ಯಾಯಾಧೀಶರು ಹೇಳಿದರು, ಇದನ್ನು ಒಳಗೊಂಡಿರುವ ವಿಧಾನ ಎಂದು ವಿವರಿಸಿದರು.

ಕಲ್ಯಾಣ್ ದಾಸ್ ವರ್ಸಸ್ ಸ್ಟೇಟ್ ಆಫ್ ತಮಿಳುನಾಡು (1972) ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್ ನೀಡಿದ ಹಿಂದಿನ ತೀರ್ಪನ್ನು ಪೀಠವು ಉಲ್ಲೇಖಿಸಿತು, ಇದು ಹಿಂದೂಯೇತರರನ್ನು ದೇವಾಲಯದ ಆವರಣಕ್ಕೆ ಪ್ರವೇಶಿಸಲು ಕೋರುವ ನಿಯಮವನ್ನು ರದ್ದುಗೊಳಿಸಿತು ಮತ್ತು 2024 ರಲ್ಲಿ ಡಿ ಸೆಂಥಿಲ್‌ಕುಮಾರ್ ವರ್ಸಸ್ ತಮಿಳುನಾಡು ಸರ್ಕಾರ ಪ್ರಕರಣದಲ್ಲಿ ನೀಡಲಾದ ತೀರ್ಪನ್ನು ರದ್ದುಗೊಳಿಸಿತು. ಹಿಂದೂ ಧರ್ಮದಲ್ಲಿ ನಂಬಿಕೆಯಿಲ್ಲದ ಹಿಂದೂಯೇತರರನ್ನು ಧ್ವಜಸ್ತಂಭವನ್ನು ಮೀರಿ ಅನುಮತಿಸಬಾರದು ಮತ್ತು ದೇವಾಲಯದ ಪದ್ಧತಿಗಳಿಗೆ ನಂಬಿಕೆ ಮತ್ತು ಗೌರವದ ಪ್ರತಿಜ್ಞೆಯ ಮೇಲೆ ಪ್ರವೇಶವನ್ನು ಅನುಮತಿಸಬೇಕು ಎಂದು ನ್ಯಾಯಾಲಯ ಹೇಳಿತ್ತು. ಅಯ್ಯಪ್ಪ ಮತ್ತು ಶಿರಡಿ ಸಾಯಿಬಾಬಾ ದೇವಾಲಯಗಳು ಸೇರಿದಂತೆ ಕೆಲವು ಪೂಜಾ ಸ್ಥಳಗಳು ಧಾರ್ಮಿಕ ಗಡಿಗಳನ್ನು ಮೀರಿ ಭಕ್ತರನ್ನು ಹೊಂದಿವೆ ಎಂದು ನ್ಯಾಯಾಲಯವು ಗಮನಿಸಿತು, ಈ ತೀರ್ಪು ಅಗಾಮಿಕ್ ದೇವಾಲಯಗಳಿಗೆ ಸೀಮಿತವಾಗಿದೆ ಎಂದು ಹೇಳಿದೆ.

## ‘ಪ್ರಾಜೆಕ್ಟ್ ಚೀತಾ’ಗೆ ಆಘಾತ : ಗುಂಡೇಟಿಗೆ ಚೀತಾ ಬಲಿ, ತನಿಖೆಗೆ ಕೇಂದ್ರ ಸರ್ಕಾರ ಆದೇಶ

ಭೋಪಾಲ್: ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನವನದಲ್ಲಿ ಗುಂಡೇಟಿನಿಂದ 19 ತಿಂಗಳ ಗಂಡು ಚೀತಾ ಸಾವನ್ನಪ್ಪಿದ ಘಟನೆಯನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ.ದೇಶದ ಮಹತ್ವಾಕಾಂಕ್ಷೆಯ ಪ್ರಾಜೆಕ್ಟ್ ಚೀತಾ ಯೋಜನೆಗೆ ಈ ಘಟನೆ ಭಾರಿ ಆಘಾತ ತಂದಿದ್ದು, ಘಟನೆಯ ಸಮಗ್ರ ತನಿಖೆಗಾಗಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಉನ್ನತ ಮಟ್ಟದ ಜಂಟಿ ತನಿಖಾ ತಂಡವನ್ನು ನಿಯೋಜಿಸಿದೆ. ಈ ಕೇಂದ್ರ ತಂಡದಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಅರಣ್ಯ ಮಹಾನಿರ್ದೇಶಕರು, ವನ್ಯಜೀವಿ ಅಪರಾಧ ನಿಯಂತ್ರಣ ಬ್ಯೂರೋದ ಹೆಚ್ಚುವರಿ ನಿರ್ದೇಶಕರು ಮತ್ತು ಪ್ರಾದೇಶಿಕ ಉಪ ನಿರ್ದೇಶಕರು ಇರಲಿದ್ದಾರೆ.

19 ತಿಂಗಳ ಗಂಡು ಚೀತಾ, ಅಕ್ಟೋಬರ್ 25 ರಂದು ಕುನೋ ಅಭಯಾರಣ್ಯದ ಸಂರಕ್ಷಿತ ಗಡಿಯಿಂದ ಹೊರಗೆ ಮೊರೇನಾದ ಪ್ರಾದೇಶಿಕ ಅರಣ್ಯ ವ್ಯಾಪ್ತಿಯಲ್ಲಿ ರಕ್ತಸಿಕ್ತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಶಿಯೋಪುರ್ ಅರಣ್ಯ ವಿಭಾಗದ ಅಧಿಕಾರಿಗಳು ಚೀತಾವನ್ನು ತಕ್ಷಣ ರಕ್ಷಿಸಿ ಜಬಲ್‌ಪುರದ ನಾನಾಜಿ ದೇಶ್‌ಮುಖ್ ಪಶುವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ರವಾನಿಸಿದ್ದರು. ಅಲ್ಲಿ ನಡೆಸಲಾದ ತುರ್ತು ಶಸ್ತ್ರಚಿಕಿತ್ಸೆಯ ವೇಳೆ



ಚೀತಾದ ದೇಹದಿಂದ ಬರೋಬ್ಬರಿ 5 ಗುಂಡುಗಳನ್ನು ಹೊರತೆಗೆಯಲಾಯಿತು. ಗುಂಡೇಟಿನಿಂದಾಗಿ ಚೀತಾದ ಆಂತರಿಕ ಅಂಗಾಂಗಗಳಿಗೆ ತೀವ್ರ ಹಾನಿಯಾಗಿದ್ದರಿಂದ, ತೀವ್ರ ನಿಗಾ ಘಟಕದಲ್ಲಿದ್ದರೂ ಚಿಕಿತ್ಸೆ ಫಲಕಾರಿಯಾಗದೆ ಅಕ್ಟೋಬರ್ 27 ರಂದು ಕೊನೆಯುಸಿರೆಳೆಯಿತು.

ಇದು ವನ್ಯಜೀವಿ ಬೇಟೆಗಾರರ ಕೃತ್ಯವೇ ಅಥವಾ ಸ್ಥಳೀಯ ಗ್ರಾಮಸ್ಥರ ಬೆಳೆ ಕಾಯುವ ಕೃತ್ಯವೇ ಎಂಬ ಬಗ್ಗೆ ಅನುಮಾನ ಮೂಡಿದೆ. ಮಧ್ಯಪ್ರದೇಶ ಸರ್ಕಾರವು ಅರಣ್ಯ ಇಲಾಖೆ ಹಾಗೂ ಪೊಲೀಸರನ್ನೊಳಗೊಂಡ ವಿಶೇಷ ಕಾರ್ಯಪಡೆ (ಎಸ್‌ಐಟಿ) ರಚಿಸಿದ್ದು, ಕೇಂದ್ರ ತನಿಖಾ ತಂಡವು ರಾಜ್ಯ ತಂಡದೊಂದಿಗೆ ಜಂಟಿಯಾಗಿ ಅರಣ್ಯ ಗಡಿ ಪ್ರದೇಶದಲ್ಲಿ ಕೂಂಬಿಂಗ್ ನಡೆಸಲಿದೆ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com